CC-O. In Public Domain. Digitized by eGangotri

ನಲ್ಲೆ

ಕಡೆಂಗೋಡ್ಲು ವೆಂಕಟರಭಟ್ಟ

Sri Vidyaprarthana Book Centre, Shagar

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಲ್ಮೆ

ಹೊನ್ನಿಯ ಮದುವೆ, ಮಾದ್ರಿಯ ಚಿತೆ, ಮುರಲೀನಾದ

ಕಡೆಂಗೋಡ್ಲು ಶಂಕರಭಟ್ಟ

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

NALME : Collection of Poems by Kadengodlu Shankar Bhat and Published by G. K. Ananthram for IBH Prakashana Gandhinagar Bangalore–560 009.

© ಸರ್ವಸ್ವಾಮ್ಯ ಲೇಖಕರದು 1982

ಬೆಲೆ : ರೂ. 5-00

ಮುಖಚಿತ್ರ : ಪದ್ಮನಾಭನ್

ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ ಕೆ ಅನಂತರಾಮ್ ಐದನೆಯ ಮುಖ್ಯ ರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್ ಎಸ್ ಎನ್ ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ಬೆಂಗಳೂರು 560 054.

Paper used for printing this book was made available by the Government of India at concessional rate.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ನನ್ನ ಪೂಜ್ಯ ತೀರ್ಥರೂಪರಿಗೆ ಮುನ್ನುಡಿ ಹಿನ್ನುಡಿಗಳಲ್ಲಿ ವಿಶ್ವಾಸ ವಿರಲಿಲ್ಲ. ಅವರು ಬರೆದ ಎಷ್ಟೋ ಪುಸ್ತಕಗಳು ಹಿನ್ನುಡಿ ಮುನ್ನುಡಿಗಳಿಲ್ಲದೆ ಪ್ರಕಟಗೊಂಡಿವೆ. ಅವರು ಕೀರ್ತಿಶೇಷರಾಗಿ ಒಂದು ದಶಕದ ಮೇಲೆ ಈ ಪುಸ್ತಕ ಪುನರ್ಮುದ್ರಿತವಾಗಿರುವುದರಿಂದ ಪ್ರಸ್ತಾವನೆಯ ನಾಲ್ಕು ಮಾತುಗಳು ಸೂಕ್ತವೆನಿಸಬಹುದು.

ಕನ್ನಡ ಕಾವ್ಯಲೋಕದಲ್ಲಿ ಚಿರಸ್ಥಾಯಿಗಳಾಗಿ ಮಿನುಗುತ್ತಿರುವ ಅವರ ಹಲವು ಗ್ರಂಥಗಳಲ್ಲಿ "ನಲ್ಮೆ" ಮುಖ್ಯವಾದುದು. ಈ ಪುಟ್ಟ ಪುಸ್ತಕದ ಮೂರೂ ಕವನಗಳಲ್ಲಿ ಲಾಸ್ಯವಾಡುತ್ತಿರುವ ಭಾಷಾಲಾಲಿತ್ಯ, ಭಾವನೆಯ ಮಧುರತೆ ಕಲ್ಪನಾವಿಲಾಸಗಳು ಹಲವು ವರ್ಷಗಳ ಹಿಂದೆ ಹೇಗೋ ಇಂದೂ ಹಾಗೆಯೇ ಹೃದಯಸ್ಪರ್ಶಿಯಾಗಿವೆ ಎಂದು ವಾಚಕರು ಹೇಳಿದುದನ್ನು ನಾನು ಕೇಳಿದ್ದೇನೆ. ಆದರೆ ಕೆಲವು ವರ್ಷಗಳಿಂದ ಈ ಸುಂದರ ಕವನ ಸಂಗ್ರಹದ ಪ್ರತಿಗಳು ವಾಚಕರಿಗೆ ಮೂರುಕಟ್ಟೆಯಲ್ಲಿ ದೊರಕುತ್ತಿರಲಿಲ್ಲ. ಪುಸ್ತಕವನ್ನು ಪುನರ್ಮುದ್ರಿಸಿ ಈ ಕೊರತೆಯನ್ನು ನೀಗಿಸಬೇಕೆಂದು ನಾನು ಯೋಚಿಸಿ ಹಲವು ವರ್ಷಗಳೇ ಆದುವು.

ನನ್ನ ಕನಸು ಇಂದು ದಿಟವಾಗಿರುವುದಕ್ಕೆ ಕಾರಣರಾದ ಇಬ್ಬರು ಮಹನೀಯರನ್ನು ನಾನು ಇಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗೆ ಐಚ್ಛಿಕ ಪಠ್ಯಪುಸ್ತಕವಾಗಿರುವ ಇದರ ಪ್ರತಿಗಳು ವಿದ್ಯಾರ್ಥಿಗಳಿಗೆ ಸುಲಭ ಲಭ್ಯವಲ್ಲದ ಕಾರಣ ಪುಸ್ತಕವನ್ನು ಅಚ್ಚುಮಾಡಿಸಬೇಕೆಂದು ಡಾ. ಜಿ. ಎಸ್. ಶಿವರುದ್ರಪ್ಪನವರು ನನ್ನಲ್ಲಿ ಹೇಳಿದರು. ಐಬಿಎಚ್ ಪ್ರಕಾಶನದ ಚೇತಕಶಕ್ತಿಯಾದ ನನ್ನ ಮಿತ್ರ ಶ್ರೀ ಜಿ. ಕೆ. ಅನಂತರಾಮ್‌ರವರು ಅದನ್ನು ಸಕಾಲದಲ್ಲಿ ಹೊರತರಬಹುದೆಂಬ ಆಶ್ವಾಸನೆಯಿತ್ತರು. ಈ ಇಬ್ಬರು ಮಹನೀಯರಿಗೂ ಪುಸ್ತಕವನ್ನು ಆಚ್ಚುಕಟ್ಟಾಗಿ ಮುದ್ರಿಸಿದ ಮುದ್ರಕರಿಗೂ ನಾನು ಆಭಾರಿಯಾಗಿದ್ದೇನೆ.

ಕ. ಈಶ್ವರಭಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊನ್ನಿಯ ಮದುವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊನ್ನಿಯ ಮದುವೆ

೧

ಪಡುವಣ ಕಡಲಿನ
ತೆಂಗಿನ ಮಡಲಿನ
ಮರೆಯಲಿ ಮೆರೆವುದು ನಾಡೊಂದು.
ಸೃಷ್ಟಿಯ ಮಾತೆಯ
ವಿಾಸಲು ಸೊಬಗಿನ
ಹೊದಿಕೆಯ ಹೊದ್ದಿಹ ಬೀಡೊಂದು.

ಅರಸುಗಳಾಳದ
ಕವಿಗಳು ಹೇಳದ
ಗಮಕಿಗಳೋದದ ಕೀರ್ತಿಸದ
ಉಳುವರ ಗೆಯ್ವರ
ಬೆವರಲಿ ತೊಯ್ವರ
ತವರೂರದು ಬಿಡಗುಗಳಿರದ.

ಬಂದುದ ನುಡಿವರು ;
ಕಂಡೆಡೆ ನಡೆವರು ;
ಸಂಜೆಯನೆಳಲೊಂದಕೆ ಹೆದರಿ
ನೊಗಗಳ ನೇಗಿಲ,
ಹೊಲಗಳ ಸೋಗಿಲ,
ಬಿಡುವರು ಮನೆಬಾಗಿಲ ಸೇರಿ.

Sri Vidyábharathi Book Centre, Sringeri

CC-O. In Public Domain. Digitized by eGangotri

ಚಿಂದಿಯನುಟ್ಟೀ
ಹಾಳೆಯ ತೊಟ್ಟೀ
ಇದೆ ಸಿಂಗರವೆಂದೊಸೆಯುವರು.
ಹೊಸ ಬೆಡಗಿನ ಕೈ
ತಿದ್ದಿ ಸದಿಹ ಮೈ
ಕೆಸರೇ ಸಾಕೆಂದೊಲಿದಿಹರು.

ಓದದ ಕಲಿಯದ
ಕಾದದ ಬಲಿಯದ
ಮಂದಿಗಳಾದರೆ ಮನೆಯಿರದೆ ?
ಮುಗಿಲಿನ ಮುಂದಲೆ
ಯುಪ್ಪರಿಗೆಯ ನೆಲೆ
ಮೆಚ್ಚದೆ ಗುಡಿಸಲೊಳಿಹರೊಲಿದೆ.

ಬಳಿಯೊಳಿ ಕೆರೆ, ತೊರೆ,
ಮರ ಬಳ್ಳಿಯ ಹೊರೆ,
ಜೀವದ ತುರುಗಳ ಮೇವುಗಳು.
ಅಂಗಳದಲಿ ಹು
ಲ್ಲೊಟ್ಟಿಲ ತೊಟ್ಟಿಲ
ಏರಿ ಮೆರೆವ ಕರು ಮಂದೆಗಳು.

ಕಂಪಿನ ತೊರೆಯಲಿ
ತೇಲುವ ಮುಳುಗುವ
ತಂಪಿನ ಕೆಯ್ವೊಲವಲ್ಲಲ್ಲಿ.
ತೆರೆಮರೆಯೆತ್ತುತ
ನೋಡುವ ಮುಗುದೆಯ
ತೆರದಾ ಕಳವೆ ತೆನೆಗಳಲ್ಲಿ.

CC-O. In Public Domain. Digitized by eGangotri

ಕಾವಲು ನಿಂತಿಹ
ತಳವರರಂದದ
ತೆಂಗಿನ ಕೌಂಗಿನ ಸಾಲಲ್ಲಿ.
ಏಕಾಂತದೆ ಲೋ
ಕಾಂತವ ಸೇರದೆ,
ಸುಯ್ಯುವ ಗಾಳಿಯ ಮರವಲ್ಲಿ.

ಆಲ್ಲಿಯೆ ಒಂದೆಡೆ
ದೆವ್ವದ ಗುಡಿಯಿದೆ ;
ಬಳಿಯೊಳೆ ಮನೆ ಯಜಮಾನನದು ;
ಗ್ರಾಮದ ದೈವವ
ನುಡಿಯಿಪ ನಡೆಯಿಪ
ಗುರಿ ತೋರಿಪ ಗುರಿಕಾರನದು.

ಊರ ಹೊರಗೆ ಪರ
ಡದ ಹೆಸರಾತಗೆ ;
ಬೆಳಕನು ಕಾಣದ ಒಳನೋಟ ;
ಜವ್ವನದೇರೊಳು
ಗೆಲವಿನ ಗುಡಿಗಳ
ಊರಿದ ಮೆಯ್ನಿರಿ–ಮೊಗ–ಮಾಟ.

ಹಬ್ಬವ ಹೇಳಲು
ಗಳಿಗೆಯ ತುಬ್ಬಲು
ಅವನೇ ನಾಡಿನ ಜೋಯಿಸನು.
ನ್ಯಾಯದ ರೀತಿಯ
ಪದ್ಧತಿ ನೀತಿಯ
ತಿಳಿಸಲಿರುವ ಮೇಲಾಳವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬರೆಹಕೆ ಬಾರದ
ಕತೆಯೊಕ್ಕಣಿಗಳ
ನೆನಪಿನ ನಿಧಿಯಿಂದೆತ್ತುವನು.
ಕಲಹದ ಕಳಗಳ
ಹುಲುಕಿರುಕುಳಗಳ
ತುಳಿವನು ಮದ್ದಾನೆಯೊಲವನು.

ಗುಡಿಸಲೆ ಅರಮನೆ,
ಹೊಲವೇ ರಾಜ್ಯವು,
ಮಗಳೊಬ್ಬಳೆ ಆಲೋಚನೆಗೆ ;
ಮುಪ್ಪಿನ ಕುರುಡಿನ
ಕತ್ತಲೆ ನಡುವಣ
ಶಾಂತಿಯ ಶಾಸನವಾ ದೊರೆಗೆ.

ನಡುಹರೆಯುವ ಕಳೆ
ದೊಬ್ಬಳೆ ಬಂದಳು
ಹೆಂಡತಿ ಜೀವಕೆ ಕೆಳೆಗೊಟ್ಟು ;
ಕಳೆಗೊಟ್ಟಿರ್ದಳು
ನಡುದಾರಿಯೊಳೇ
ಮರೆಯಾಗಿರ್ದಳು ಬೀಳ್ಕೊಟ್ಟು.

"ಹೊನ್ನಿಯೆ ! ನೀನೇ !
ಎನ್ನೆದೆ ತಂಪಿನ
ಮೋಹದ ನೆಳಲಾಗಿಹೆ ಮಗಳೇ !
ಅಚ್ಚಿರಿದೆಮ್ಮಯ
ನಲ್ಮೆಯ ಹೆಮ್ಮೆಯ
ಜೀವನ ಸಾರದ ಬಿರಿಮುಗುಳೇ !

Sri Vidyabharathi Book Centre, Sringeri

CC-O. In Public Domain. Digitized by eGangotri

ದೈವವೆ ಎಮಗೊಡ
ನಾಟವ ಕೊಟ್ಟಿತು.
ದೈವವೆ ಅಗಲಿಕೆಗೊಟ್ಟಿಹುದು.
ಅದರೊಂದಾಣತಿ
ಮೀರುವ ದಂಪತಿ
ಪಾಪದ ತೊಟ್ಟಿನ ಹೂವಹುದು.

ತೋರದ ನಾಡನು
ಸೇರ್ದಳು ಹೊನ್ನಿಯೆ !
ನಿನ್ನನು ಹೆತ್ತಾ ಸಿಂಗಾರಿ.
ನಿನ್ನಯ ಕನ್ನಡಿ
ಮೊಗದಲಿ ಕಂಡೆನು
ಆಕೆಯ ಬಿಂಬವ ನಲವೇರಿ.

ನಿನ್ನಬ್ಬೆಯ ಜತೆ
ಗಾಳಿದ ಮನೆಯನು
ಇನ್ನೊಬ್ಬಳ ಜತೆಗಾಳುವೆನೇ ?
ಒಂದೇ ಹೆಣ್ಣಿನ
ಎರಕವದಲ್ಲದೆ
ಹೆರವರ ಬೆಸುಗೆಯ ಮೆಚ್ಚುವೆನೇ ?

ಎದೆಯನು ಬಿಚ್ಚುವೆ
ಹೇಳುವೆ ಮಗಳೇ !
ಆಕೆಯ ನೆನಪದೊ ಬಾಳುವುದು.
ಗದ್ದೆಯ ಹೊಲಗಳ
ನಡುವಣ ನೇಗಿಲ
ಹಿಡಿದರೆ ಹಾಡಿನೊಳೊಸರುವುದು.

CC-O. In Public Domain. Digitized by eGangotri

ಕಂಗಳು ಹೋದುವು
ಕಾಲ್ಗಳು ಕುಸಿದುವು
ಹೊನ್ನಿಯೆ ! ನೀನೇ ಎನ್ನ ಗತಿ !
ತಾಯಿಯ ನೇಮದ
ಬೇಹಿನ ಕೆಲಸದ
ಆಳೀ ಮುಪ್ಪಿನ ಸಂಗಡಿತಿ.

ನಡುಮನೆ ಗೌಡನ
ಮುದ್ದಿನ ಕುವರನ
ಜತೆಯಲಿ ನಿನ್ನನು ಹಂದರೊಳು,
ನೀರೆರೆದಿತ್ತರೆ
ಪುಣ್ಯವ ಸವಿಯುವ
ಕಣ್ಣಿನಗಿಲ್ಲದುದಿದೆ ಅಳಲು.

ಬಂಗಾರದ ಪು
ತ್ತಳಿಯೇ ! ನೋಯುವು
ದೆನ್ನೆದೆ—ನಿನ್ನನು ಕೊಡಲುಂಟು.
ಜೀವದ ಸೊತ್ತನು
ಪ್ರೇಮದ ಬಿತ್ತನು
ಕೊಡಬೇಕೇ ದೊರೆಯಲು ನಂಟು ?

ನಲ್ಲ್ಗವರನ ಕೈ
ಹಿಡಿದೊಪ್ಪುವ ಮಗ
ಳೊಬ್ಬಳಿ ಸೊಬಗನು ನೋಡುವುದು
ಸೈಪಾದರು, ಕೈ
ಯೊಡವೆಯ ಕೊಟ್ಟರೆ
ಹೆರವರಿಗದು-ತನಗೇನಿಹುದು ?

 CC-O. In Public Domain. Digitized by eGangotri

ಎನ್ನೀ ಒಡಲಿನ
ಗೂಡಿಂ ಜೀವವು
ಹಾರುವುದಲ್ಲವೆ ? ನೀ ಮತ್ತೆ—
ಅವನನೆ ಕೈಹಿಡಿ—
ಹೆಂಡತಿಯಾಗಿರು—
ತಂದೆಯು ಭಾಷೆಯನೆಣಿಸುತ್ತೆ.

ಹಲವರ ಸೇರದ
ಒಬ್ಬನ ಗರತಿಯ
ಹೊಸ್ತಿಲ ಮೇಲ್ಸರಿ ಕುಣಿಯುವಳು.
ಹಿರಿಯರು ನಲಿವರು,
ಬಂಧುಗಳೊಲಿವರು,
ಹರಸುತಿಹವು ಕುಲದೈವಗಳು.

ಎದ್ದೇ ಬರುವುವು
ಪುಣ್ಯಗಳೆಲ್ಲವು;
ಸೆರಗನು ಹಿಡಿವುದು ಮಂಗಲವು;
ಮಕ್ಕಳ ಮರಿಗಳ
ಚೊಕ್ಕಳ ಕಳಕಳ
ಮುಪ್ಪಿನವರೆಗೂ ಬಾಳಿಪುವು."

ಎಂದೀ ಪರಿಯಲಿ
ಪ್ರೇಮದ ಸರಿಯಲಿ
ಮೀಯಿಸುವನು ತನ್ನೆಳಮಗಳ.
ಕಾಲೂರಿನ ಗಡಿ
ಬೇಲಿಯ ದಾಟದ
ಚೆನ್ನೆಗೆ ನುಡಿಪನು ಪಾಟಗಳ.

CC-O. In Public Domain. Digitized by eGangotri

ಸಂಜೆಯ ನೆಳಲದೊ
ಅಂಗಳಕಿಳಿವುದು ;
ಮನೆಯಲಿ ಹಣತಿಗೆ ಸೊಡರಿಹುದು,
ಸುತ್ತಲು ನೀರವ
ರಾತ್ರಿಯ ಭೈರವ
ನರ್ತಿಸಲೆದೆ ತಲ್ಲಣಿಸುವುದು.

ಕಂಗಾಲಾಗಳು
ಹೆತ್ತವನಿರುವನು
ಬಿಂಗಾವಲೊಳೆಂದೆನುತಿಹಳು.
ಹಿಂಗಾರಿನ ಮಳೆ
ಹನಿಯನು ನಂಬದೆ
ಬಂಗಾರದ ಕಣ್ಣಿನ ನವಿಲು ?

ನೆರಮನೆಗಳ ಸೊಡ
ರಾರುವ ಮುನ್ನವೆ
ಕುರುಡನ ಮನೆ ಬೆಳಕಾರುವುದು.
ಕಣ್ಮುರುಡಾದರು
ಬರಡಾಗದ ಮನ
ನಿದ್ದೆಯ ಕುರುಡಿನೊಳೊರಗುವುದು.

೨

ಮುಗುಳಾಗಿರೆ ಮು
ಚ್ಚುವನರುಗಂಪನು
ಆರಲಾದರೆ ಮುಚ್ಚಲುಬಹುದೇ ?
ಮುಗುದತನದೊಳೆದೆ
ಮುಚ್ಚಿರೆ ಹರಯದೆ
ತೆರೆಯದೆ ? ಅದ ನಚ್ಚಲುಬಹುದೇ ?

CC-O. In Public Domain. Digitized by eGangotri

ಕೂಸಾಗಿರೆ ಪ್ರೇ
ಮಕೆ ಉಪವಾಸವು;
ಭಕ್ತಿಯು ಪಾರಣೆ; ನುಡಿಮುಡಿಯು;
ತಂದೆಯೆ ದೇವರು;
ಮನೆಯೇ ದೇಗುಲ;
ಬಾಳ್ವುದೆ ಕೊನೆವರೆಗೀಪರಿಯು ?

ಮುಂಜಾವದ ಮೂ
ಡಣ ಬಾನಂದದಿ
ಹೊನ್ನಿಯ ಮೊಗ ಕೆಂಪೇರಿದುದು.
ನುಡಿಯಲಿ, ನಡೆಯಲಿ,
ನೋಟದಿ, ಪಾಟದಿ,
ಲಜ್ಜೆಯೆ ಹಜ್ಜೆಯನಿಟ್ಟಿಹುದು.

ಜವ್ವನವೆನ್ನಲೆ ?
ಮದವಿಲ್ಲದ ಮನ.
ಶೈಶವವೆನ್ನಲೆ ? ಕದಡು ನಗೆ.
ತಂದೆಯ ಸೇವೆಯ
ನಡುನಡುವಾವೆಯ
ಮಡಿಕೆಯ ತೆರದಲಿ ಕಾವ ಬಗೆ.

ನೋಟಕೆ ಕೊಂಕುತ
ಕೂಟಕೆ ಹಿಂಗುತ
ಆಟಕೆ ನಾಚುತ ತೊಲಗುತ್ತ
ಸುಗ್ಗಿಯ ಮೊದಲಿನ
ಕೋಗಿಲೆ ಹುಗಿಲಿನ
ಬುಗ್ಗೆಯೆನಲು ಸೋರುವ ಚಿತ್ರ.

CC-O. In Public Domain. Digitized by eGangotri

ಬಂತಾಕೆಗೆ ಹರೆ
ಯದವರ,—ದುರ್ವಿಧಿ
ಎಳೆಯರೆದೆಗೆ ಮಾಡುವ ಮಾಟ—
ಗಂಡಿನ ರೂಪವ
ಗಾಡಿಯ ಮೋಡಿಯ
ಕಂಡೊಲಿಯುವ ಕಡೆಗಣ್ಣೋಟ.

ಆದುವೇ ನಮ್ಮೀ
ಹೊನ್ನಿಯ ಹದುಳದ
ಬಾಳುವೆ ತೊರೆಯಲಿ ಸುಳಿಯಾಯ್ತು.
ಆವಳಿದೆ, ಜೀವವ
ತರಿಯಲು ಮಸಗುವ
ಕಾಮನಬಾಳಿಗೆ ಗುರಿಯಾಯ್ತು.

ನೆರೆಯೊಳಿ ಪಡಿನುಡಿ
ಯಾಡುವ ದರಿಯಿದೆ;
ಹಸಲೆಯ ಮೇಯುವ ಮುಂದೆಗಳು;
ಅಲ್ಲಿಯೆ ಮಾವಿನ
ತೋಪಿನೊಳೊಂದೆಡೆ
ಹಿಂದೋಳದಿ ತೊನೆದಾಡಿದಳು.

ಆವುದೊ ರಸದಲಿ
ಹೊಯ್ದಾ ರಾಗವ
ಮೊಗೆದಳು ನುಡಿಯಲಿ ತುಂಬಿದಳು.
ಹಾಡೊಳು ಸುರಿದಳು,
ಕಂಬನಿಗರೆದಳು,
ಮುಂಗಾರಿನ ತಂಬನಿಯವೊಲು.

CC-O. In Public Domain. Digitized by eGangotri

"ಎನ್ನೀರಾಗವ
ಕದ್ದವರಾರೆಲೆ ?
ಕೇಳುವುದಿದೊ ಪಡಿ ನುಡಿಯಾಗಿ !
ಕಣಿವೆಯ ಗುಮ್ಮನ
ಬೆದರಿಸುವಾಟವೊ ?
ನೋಡುವೆ" ನೆಂದಿಳಿದಳು ತೂಗಿ,

"ಮಾತೇ ಬಾರದ
ಕಾಡುಗಳಿಲ್ಲಿಯ
ಹಾಡನು ಕಲಿವುವು ? ಹುಚ್ಚೆನಗೆ !
ಆಕಾಶದೊಳೆ
ತ್ತೆತ್ತಲೊ ತಿರುಗಿದ
ನುಡಿಯೇ ಹೊಕ್ಕಿತು ಕಿವಿಯೊಳಗೆ !

ಮೊದಲಿನ ರಾಗವ
ಹಾಡುವೆ ನೋಡುವೆ" —
ಎಂದೇರಿದಳಾ ಉಯ್ಯಲೆಯ.
ಮೊದಲಿನ ತೆರದೊಳೆ
ಪಡಿದನಿಯಾದುದು
ಬೆಚ್ಚಿಸಿ ಬೆದರಿಸಿ ಬಾಲಿಕೆಯ

ಥಟ್ಟನೆ ನೆಗೆದಳು;
ದನಗಳ ಕರೆದಳು;
ಗಾಳಿಗೆ ಸಿಲುಕಿದ ಮುಗಿಲೆನಲು
ನೋಟವ ವಿಂಚಿಸಿ
ಮೊಗವನು ಹೊಂಚಿಸಿ
ತಳುವದೆ ಹೊನ್ನಿಯು ತಳರಿದಳು.

 CC-O. In Public Domain. Digitized by eGangotri

"ನಿನ್ನೀ ಹಾಡನು
ಹಿಡಿದುದು ತಪ್ಪೇ ?
ಚೆಲುವೆಯೆ ! ಬೆದರುವೆಯೇಕಿಂತು ?
ಎನ್ನೆದೆ ಕಲಿಯುದೆ
ಆನೇ ಕಲಿತೆನೆ ?
ಬೈಯನ್ನನು ನೀ ಬೇಹಂತು.

ಕೋಪಿಸು, ಜರೆ, ಶಾ
ಪವ ಕೊಡು ಹೊನ್ನಿಯೆ !
ಎಂತಾದರು ನುಡಿ—ಆದೆ ಸಾರ !
ಒಂದೇ ಬಯಕೆಯು
ಅಡಸಿದೆ ನನ್ನಿಯೆ —
ಹಾಡೊಳು ಬೆರಸೆನ್ನಯ ಹೆಸರ.

ಚೆನ್ನಗೆ ಬಿರುದುಗ
ಳಿಲ್ಲೆಲೆ ಕೋಮಲೆ !
ಚೆನ್ನನು ಚೆಲುವನಿದೇ ಬಿರುದು.
ದೇವರು ದಯೆಗೊ
ಟ್ಟೀ ಭಾಗ್ಯವ ನೀ
ಹರಸುತ ನುಡಿಯಲಿ ಸುರಿ ಕೋದು.

ಎನಿತೋ ಸಂಜೆಯ
ಕಳೆದೆನು ನಲ್ಲಳೆ !
ಈ ಕಣಿವೆಯೊಳಿಲ್ಲಿಯೆ ನಿಂದು.
ನೆಳಲಲಿ ಕಳೆತನ
ಮಾಡಿದೆ ಕೇಳಿದೆ —
ಕಂಡಿರೆ ನೀವಾಕೆಯನೆಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಡಿನ ಹಕ್ಕಿಯು
ತಿಳಿದಿದೆ ನಿನ್ನೀ
ಗೂಢವ, ಚಲಿಪಿಲಿ ದನಿಯಿಂದ
ಹೇಳಿತು—ಮೂಢನೆ !
ನಾಡಿನ ಗೌಡನ
ಮನೆ ತುಂಬುವ ತೆನೆಯಿವಳಂದ.

ಎನ್ನೆದೆ ಹೌವನೆ
ಹಾರಿತು ಹೊನ್ನಿಯೆ !
ಎನಗೂ ನಿನಗೂ ಬಲು ದೂರ !
ಸೌಭಾಗ್ಯದ ಸಾ
ಗರದಾಚೆಯ ದಡ
ನಿನ್ನದು—ನನ್ನದು ಈ ತೀರ.

ಎರಡು ದಿನದಿ ದುಡಿ
ದರೆ ಒಂದೂಟಕೆ
ಬರುವುದು ನಮ್ಮಯ ಸಂಪತ್ತು.
ಗ್ರಾಮದ ಹಿರಿಯನ
ಚೊಚ್ಚಲು ಕುವರಿಗೆ
ಸಾಲುವುದೇ ಬಡವನ ತುತ್ತು ?

ಮರುಳಿದು—ಬಲ್ಲೆನು
ಎನ್ನೂರೊಡತಿಯೇ !
ನಲ್ಮೆಯೆ ಮರುಳಾಗಿರಲದರ
ಗೆಯ್ಮೆಯೊಳಾವುದು
ಹುರುಳೆಂದೆನಬವುದು ?
ಜಪಿಸುತಿರುವೆ ನಿನ್ನಯ ಹೆಸರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಡೊಂದನು ಕ
ಟ್ಟುತ ನಿನಗೊಪ್ಪಿಸೆ
ಬರೆದೋದಿದ ಸೈಪೆನಗಿಲ್ಲ.
ಅಕ್ಕರೆಯೆಂಬುದೆ
ಅಕ್ಕರವೆನಗದೆ
ಬರೆದೊಪ್ಪಿಸಿತೀ ಸವಿಸೊಲ್ಲ.

ಕೇಳುವೆನೊಂದನು —
ಸಿರಿವಂತನ ಸುತೆ
ಸಿರಿಯೊಂದಕೆ ಮೋಹಿಸಲಹುದೆ ?
ಹಣ ಕಾಸುಗಳಾ
ಡುವ ಕೈಹಿಡಿದರೆ
ಮನವೂ ಹಿಡಿಯಲಿ ದೊರೆಯುವುದೇ ?

ಬಡಜನರನುಭವ
ವಿಂತಿದೆ—ಪಂತದೆ
ತಡೆದರು, ಬಗೆ ಹರಿದೆಲ್ಲೆಲ್ಲಿ
ಸಿರಿಯೋ ಬಡತನ
ವೋ ಸೆರೆಗೊಂಬುದು
ಮೆಚ್ಚಿದವಳ ಮುಂಗುರುಳಿನಲಿ.

ನಿಜವನು ನುಡಿ ! ಬಾ
ಲಿಕೆ ! ನಿಷ್ಕುರತೆಗೆ
ಬೆದರದೆ ನುಡಿ ತುಟಿಗಳನೆತ್ತಿ.
ಬಡವರ ನಲ್ಮೆಗು
ನಿಮ್ಮಯ ಕೂರ್ಮೆಗು
ಭೇದವಿಹುದೆ ? ಹೇಳೊತ್ತೊತ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದಾದರೂ ಮಾ
ತಾಡೆಯ ಮೋಹಿನಿ ?
ಮಾತಿನ ತುಟಿಗೇತಕೆ ಮುದ್ರೆ ?
ತಾನೇ ಬರುವಾ
ಸಾವನು ಕರೆಯದೆ
ಪುಣ್ಯವ ಸಂಪಾದಿಸು—ಭದ್ರೆ !

ಈಪರಿ ನುಡಿಯುತ
ಸಡಗರದಿಂದಲಿ
ದಾರಿಯನಡಹಾಯ್ದನು ತರುಣ.
ಗಿರಿಯಿಂದುರುಳುವ
ನಿರ್ಝರದಂದದವ
ಆವಳಡಿಯಲಿ ಬಿದ್ದನು ಚೆನ್ನ.

"ಆರೆಲೆ ಜವ್ವನ
ನೋಡಲು ಕಾವನ
ಕಾಲಾಳಂದದಿ ಬಂದಿರುವೆ ?
ಲೋಕದ ರೀತಿಯ
ನೀತಿಗಳರಿಯದೆ,
ಏನೇನೋ ಗಳಹುತಲಿರುವೆ.

ಊರಿನ ಮಂದಿಗೆ
ತೋರುತ ದಾರಿಯ
ನಡೆಯಿಪನಲ್ಲವೆ ಎನ್ನ ಪಿತ ?
ಕಟ್ಟೆಂದರೆ, ಹಳೆ
ಕಟ್ಟಳಿಯೆಂದರೆ
ಆತನ ಸುಳಿಯಿಪ ಪುಣ್ಯ ಪಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆತ್ತವನೆಂದರೆ
ಹೊತ್ತವನಲ್ಲವೆ ?
ಹಲವು ಬರಿಸ ಹೊರೆದವನಲ್ಲಾ ?
ತನುವೋ ಜೀವವೊ
ಮೆಯ್ಸಿರಿಯೆಲ್ಲವು
ಆತನು ಕೊಟ್ಟಾ ಋಣವಲ್ಲಾ ?

ಕಂಡಿವರನು ಕೈ
ಹಿಡಿದರೆ ತಂದೆಗೆ
ಕೆಂಡ ಮುನಿಸು ಬಾರದೆ ಇಹುದೆ ?
ಕುಲದೈವದ ಚಾ
ವಡಿ ಗುಡಿ ದೆವ್ವದ
ಶಾಪವು ನಮ್ಮನು ಸುಡದಿಹುದೆ ?

ಕುಲದಲಿ ಜನ್ಮವ
ನಾವೇ ಕೊಂಬೆವೆ ?
ಸಿರಿಯನು ನಾವೇ ಪಡೆಯುವೆವೆ ?
ನಳನಳಿಸುವ ಮೆಯ್
ಸಿರಿ ನಮ್ಮೊಡವೆಯೆ ?
ನಮಗವುಗಳ ಮೇಲೊಡೆತನವೆ ?

ಈ ಪರಿಯಲಿ ಕೈ
ಹಿಡಿವುದು ಬಿಡುವುದು
ನಮ್ಮಧಿಕಾರಕೆ ಸೇರದಧು.
ಮನೆತನಗಳ ನಡೆ
ವಳಿಯೆಂತಂತೆಯೆ
ನಡೆವುದೆ ನಮ್ಮಯ ಕುಲ ಬಿರುದು."

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಾಡುತೆ ನಿ
ಟ್ಟುಸಿರನು ಕರೆದಳು,
ನಿಟ್ಟುಸಿರಿನ ಭಾವನೆಯೇನು ?
ಮೊಗ ನೇತಾಡಿತು,
ಬಾಗಿತು, ಕಂಬನಿ
ಸುರಿದುದರ ಅರ್ಥಗಳೇನು ?

'ಅಂಬಾ !' ಎನ್ನುತೆ
ದನಗಳು ಕರೆದುವು,
ತಾವರೆ ಮೊಗಕಿಬ್ಬನಿಯಾಯ್ತು.
ಕಡಲಿಂದೀ ಕಡೆ
ಕಲರವ ಗೈಯುತೆ
ಹಾರ್ವುವು ಹಕ್ಕಿಗಳಿಳಿಹೊತ್ತು.

ಪಡುಗಡಲಿನ ತೆರೆ
ತಳ್ಕಿಯ ಸೇರುತ
ಬಿದ್ದನದೋ ರವಿ ನಿದ್ದೆಯಲಿ.
ನಡುವಣ ದೇಗುಲ
ದಾ ಘಂಟಾರವ
ಘಣ ಘಣಿಪ್ರದು ಗವಿ ಕಿವಿಗಳಲಿ.

ಹಿನ್ನೋಟದೊಳಾ
ಬೆನ್ನನ ನೋಡುತ
ಕಣ್ಣೀರೊಂದನು ಸುರಿಸಿದಳು.
ಕಟ್ಟಳೆ ವಿಾರುವ
ಹೆಣ್ಣೇ ? ಎನ್ನುತ
ನಿಟ್ಟೋಟದಿ ಮನೆ ಸೇರಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲಾಕಾಶದ
ಬಣ್ಣದ ಚೇಲವು
ಕತ್ತಲೊಳೆಲ್ಲಿಯೊ ಮರೆಯಾಯ್ತು.
ಹಿಂಬಗಲಿನ ಬ
ಣ್ಣದ ಮೊಗವಿವನದು
ಎಲ್ಲೆಲ್ಲಿಯು ಕಾಣಿಸದಾಯ್ತು.

*

ನಾಡುಗರಾರೋ
ಬಂದಿಂತೆಂದರು—
ಏನಿದು ಪರಿ ಗುರಿಕಾರನಲಿ ?
ಮಗಳನು ಮನೆಗೆಂ
ದೆನುತಲೆ ಪಡೆದನೆ ?
ಸಡಿಲಿತೆ ಪದ್ಧತಿ ಓರಿಯನಲಿ ?

ಜವ್ವನಿಗರು ಹಲ
ರಿಲ್ಲವೆ ? ನಮ್ಮಯ
ಗೊತ್ತಿನವರ ಮಕ್ಕಳನರಸಿ,
ಚೆನ್ನಿಗನೊಬ್ಬನ
ಕೈಗಿಡು ಮಗಳನು ;
ಆಗಲವಳು ಎಳವೆಯೊಳರಸಿ.

ಊರಿದು ಕನ್ನಿಕೆ
ಹೆಂಗಳಿಗೊಪ್ಪದು ;
ಕೆಡುಗಂಗಳು ಹಲವಿಹವಿಲ್ಲಿ.
ಚೆಲುವೆಗೆ ನಂಜಿನ
ಗಾಳಿಯ ಸೋಂಕಿಪ
ಭೂತಗಳಿವೆ ಹಲವಲ್ಲಲ್ಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಣ್ಣಿದ್ದರು ಕಾ
ಣದು ಮುಂದಣ ಗತಿ,
ಹೊನ್ನಿದ್ದರು ಕೆಡು ನುಡಿಬಹುದು.
ಕೆಡು ನುಡಿಯೊಂದೇ
ಹರಯದ ಬಾಲೆಯ
ಸಿಡಿಲಿನ ಪರಿ ಕೆಡೆಯಿಸಬಹುದು.

ಕುವರರ ಪಡೆವಾ
ಭಾಗ್ಯವನರಿಯೆನು,
ಹೆಣ್ಣನು ಹೆತ್ತನುಭವವಿಹುದು.
ಅನ್ನಿಗರೊಡವೆಯ
ಬೇಗನೆ ಕೊಡುವುದು—
ತಂದೆಯ ಜೀವದ ನೋಂಪಿಯದು.

ಇದಕಾ ಮುದುಕನು
ಕಣ್ಣೀರೊರಸುತ—
"ಸಮಯದಿ ಬಂದುದು ಹಿತವಾದ ;
ಕೊಡುವೆನು ಮಗಳನು
ನಾಡಿನ ಗೌಡನ
ಮಗನಿಗೆ ಧಾರೆಯನೆರೆದೆಂ"ದ.

ಬಾಗಿಲ ಮರೆಯಲಿ
ಹೊನ್ನಿಯ ನೋಟವು
ಹೊಂಚಿತು ಮಿಂಚಿನ ವೇಗದಲಿ.
ನೀಳ್ದನಿ ಮೊಳಗಿತು
ಕಂಬನಿಯುದುರಿತು
ಬಗೆ ಮುಸುಕಿದ ಮಳೆಗಾಲದಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೩

ಪಡುವಣ ತೀರದ
ಕನ್ನಡ ನಾಡಿನ
ಕಾರ್ಗಾಲದ ವೈಭವವೇನು ?
ಚಿಲ್ಲಿದರನಿತೂ
ತೀರದ ನೀರಿನ
ಜಡದೇಹದ ಕರ್ಮುಗಿಲೇನು ?

ಕೆರೆಗಳನುಕ್ಕಿಸಿ
ತೊರೆಗಳ ಸೊಕ್ಕಿಸಿ
ಗುಡ್ಡವ ಬೆಟ್ಟವ ಕೊರೆಕೊರೆದು.
ಕಡಲಿನ ತೆರೆಗಳ
ರಿಂಗಣ ಗುಣಿಯಿಸಿ
ಮೊರೆ ಮೊರೆವುದದೋ ಸರಿ ಸುರಿದು.

ಕುದುರೆಮೊಗದ ಕಡಿ
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು.
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು.

ಆವೇಶದ ವೇ
ಷದ ಬಿರುಸುಟ್ಟುರೆ
ಊರೂರಲಿ ಹಾರೋಡುವುದು.
ಮರಗಳ ಕೀಳುತ
ಬಂಡೆಯ ಹೋಳುತ
ಜಗಜಟ್ಟಿಯು ತೆರನಾಡುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಗಲಿರುಳೆನ್ನದೆ
ಹೊಡೆಯುವ ಜಡಿಮಳೆ
ಬಡಿಕೋಲ್ಮಿಂಚಿನ ಲಾಗುಗಳು.
ಮನೆಗಳ ಮನಗಳ
ಒಳಗೂ ಹೊರಗೂ
ಜಿನುಗುತಿರುವ ಹನಿ ಸೋನೆಗಳು.

ಮುಗಿಲಿನ ಹುಬ್ಬಿನ
ಗಂಟಿಕ್ಕುತ ಬಿರು
ದನಿಯಲಿ ಬೆದರಿಸುತಿಹನಲ್ಲ
ನಲ್ಲನೆನುತೆ ಆ
ಗಸವೆಣ್ಣೂಗುತೆ
ಸುರಿಸಿದ ಕಣ್ಣೀರ್ವೊನಲೆಲ್ಲ.

ಅತ್ತತ್ತೂ ಆ
ಯಸದಲಿ ಸತ್ತೂ
ಸಾಯದೆ ನೋಪನು ಹಿಂಗಿಸುತ,
ಎಂತಾದರು ಬಾ
ಳಲೆ ಬೇಕೆನ್ನುತ
ದೆಸೆಯಿರ್ದುದು ಬಗೆ ತಿಳಿಯಿಸುತ.

ಮಳೆ ಕುಂದಿತು, ನೆರೆ
ಯಿಳಿದುದು, ವಾಹಿನಿ
ಎದೆ ಕೆಸರೆತ್ತಲೊ ಹೋಗಿರಲು
ತಿಳಿವಿನ ತೆಳುವಿನ
ಅಲೆಗಳ ವಲಿಗಳ
ಬಲೆಯಲಿ ನೇಸರ ಹಿಡಿದಿರಲು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಸ ಹಸುರಿನ ತೊಡ
ವುಟ್ಟಳು ಮೇದಿನಿ,
ಚಿಗುರ ಮೊಗಕೆ ಮುಗುಳಿನ ನತ್ತ,
ಕರ್ಮೋಡದ ಕು
ಪ್ಪಸವನು ಬಿಟ್ಟಳು,
ಬೆಳ್ಮುಗಿಲಲಿ ಗೈದಳು ಹೊಸತ.

ಮುದುಕನ ಮನೆಯಲಿ
ಮದುವೆಯ ಸನ್ನಣ —
ಹೊನ್ನಿಯ ಬಾಳುವೆಯತಿಥಿಯನು —
ಕರೆಯಲು ಕೈ ನೀ
ರೆರೆಯಲು ಸಮೆದರು
ಚೆನ್ನಿನ ಚಪ್ಪರ ಹಂದರನು.

ನಾಡಿನ ಹಿರಿಯನ
ಸಿರಿವಂತನ ಮನೆ;
ಒಬ್ಬಳೆ ಮಗಳಾ ಮದುವೆಯಲ !
ಆತನ ಲೋಕದ
ಕೊನೆಯುತ್ಸವವದು;
ಎನಿತೋ ಸಂಭ್ರಮವಿರುವುದಲ !

ಅಂದಣವೇರಿಯೊ
ಕುದುರೆಯನೇರಿಯೊ
ಗೌಡನ ಮಗ ಬಾರನೆ ವರಿಸೆ ?
ಪಟ್ಟೆಯ ಸೀರೆಯೊ
ಜರಿಕುಪ್ಪಸಗಳೊ
ಬಾರವೆ ಹೊನ್ನಿಯ ಸಿಂಗರಿಸೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಳೆಯ ತೋರಣ,
ಚಿಗುರಿನ ಜಲ್ಲರಿ,
ಸುರಗಿಯ ಪೊಲ್ಲೆಯ ಜಲ್ಲಿಗಳು,
ಹಣ್ಣಡಕೆಯ ಹೊಂ
ಬಾಳೆಯ ಗೊನೆಗಳ
ತೂಗಿಸಿದರು ಮೇಲ್ಕಟ್ಟಿನೊಳು.

ಆನೆಯನೇರಿಯೆ
ಬಂದರು ಸಾಲ್ವುದು
ಮಂಡಪದೆತ್ತರ—ಮೇಲಾಗಿ
ಸಿಂಗರ ಬಿತ್ತರ
ಗೈದಿಹರೆಲ್ಲರು
ಕರೆಯದೆ ಬಾಂಧವರೊಂದಾಗಿ.

ಮಂಡಪವೇತಕೊ
ಸಿಂಗರವೇತಕೊ
ಆರಾದರು ನೋಡಿದರೇನು ?
ಗತಿಯನು ಮರಸಲೊ
ವಿಧಿಯನು ಮುಚ್ಚಲೊ
ತಮ್ಮನೆ ವಂಚಿಪ ಹದನೇನು ?

ಬಡವೆಯ ಹೊನ್ನಿಯ
ಮನದುಮ್ಮಳವನು
ಕಂಡವರುಂಟೇ? ಸೆಡವಿನಲಿ
'ಗೌಡನ ಮಗ' ಎಂ
ದರೆ ಬಗೆಯೊಲಿವುದೆ ?
ಮರುಮಾತಾವುದು ಹಡೆದರಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದೊಂದೇ ಹನಿ
ಕೂಡಿದ ತೆರೆದಲಿ
ಬಂಧುಗಳಿಲ್ಲರು ಬರುತಿರಲು
ಒಂದೊಂದೇ ಮಡಿ
ಹೆಚ್ಚಿದುದಾಕೆಯ
ಬಸಿರೊಳಗೇ ಕೂಳ್ಕುದಿವಳಲು.

ಏನೆಲೆ ಹೊನ್ನಿಯೆ !
ಕುಳಿತಿಹೆ ಬಿಮ್ಮನೆ,
ಮದುವೆಯೆನಲು ಮಾರಿಯು ಬಲಿಯೆ ?
ಬಾರೊಡಗೂಡೆಲೆ
ಚೆಲುವೆಯೆ ! ಲಜ್ಜೆಯ
ಬೀರೆನ್ನುತ ಗೆಳತಿಯರೊರೆಯೆ —

ಹೆಣ್ಬಲಿಯಲ್ಲವೆ ?
ಮನದೊಲವಿಲ್ಲದೆ
ಅವಳನು ಗಂಡೊಬ್ಬನ ಮನೆಗೆ
ನೂಕಲು, ಮದುವೆಯೆ ?
ಎನ್ನುತ ಮೌನದೆ
ಗಳಹುತಿಹಳು ಹಲುಬುವಳೊಳಗೆ:—

ವಾದ್ಯದವರು ತಂ
ಬಟೆಯವರೆಲ್ಲರು
ಬಂದರು, ನಾಳೆಯ ಬೆಳಗಿನಲಿ
ಧಾರೆಯನೆರೆವರು
ಶೋಭನವೊರೆವರು
ಮದುವೆ ಮುಗಿವ ಸಂತೋಷದಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡುಗಡಲಿನ ತಡ
ಗುಂಡಿಯೊಳೊಂದೆಡೆ
ಹಸೆಯನು ಹಾಸಿಹರೆನಗಾಗಿ.
ಮಣಿಗಳ ಬೆಳ್ಕು
ತ್ತುಗಳನು ಸುರಿವುವು
ಮರಿಮಿಾಂಗಳು ಸಿಂಗರಕಾಗಿ.

ಆಳದೊಳೊಂದೆಡೆ
ತೆರೆಯೊರಗುವ ಕಡೆ
ಕಡಲಿನ ಮಂದಿಯ ಬಳಗದಲಿ
ಒಂದೇ ಹಂದರೊ
ಳೊಂದೇ ಭಾವದಿ
ಕೂಡಲಿಹೆವು ಸುಖ ಶಾಂತಿಯಲಿ.

ನಾಳೆಯ ಮುಂಜಾ
ವದ ಕಿರುಬೆಳ್ಳಿಯು
ಮೂಡಲಿ ಹಿಡಿಯಲಿ ಕಕ್ಕಡವ.
ಹೊನ್ನಿಗೆ ಚಿನ್ನಗೆ
ದಾರಿಯ ತೋರಲಿ
ಕತ್ತಲೆ ಕವಿಯಲಿ ಮಂಡಪವ.

ಹುಟ್ಟಿನ ತೊಟ್ಟಿನ
ತಂದೆಯ ಮರೆಯುವೆ,
ಹುಟ್ಟು ಮನೆಯ ಮಾಡವ ಮರೆವೆ;
ಕನ್ನಡ ನಾಡಿನ
ಪಡುವಣ ಕಡಲಲಿ
ಕಣ್ಮುಚ್ಚುತೆ ನಿದ್ರಿಸುತಿರುವೆ.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಮರುಳೀನೋ ಈ
ಚೆಲುವೆಗೆ ? ಸಾವನು
ಬೆದಕುವಳಲ್ಲವೆ ಜವ್ವನದಿ ?
ಬಾಳುವೆಯಾಸೆಯೆ
ಇಲ್ಲವೆ ಮುಗುದೆಗೆ ?
ಮರುಕವ ತೋರಳು ನಗೆಮೊಗದಿ.

೪

ಮದುವೆಯ ದಿನ-ಮುಂ
ಜಾವದ ಕೋಳಿಯು
ಕೆಲೆವ ಮೊದಲೆ ಗಜಬಜವಾಯ್ತು,
ಮದುಮಗಳಾವಳು ?
ಮೊಗವನೆ ತೋರಳು !
ಮದುವೆಯ ಗಳಿಗೆಯದೋ ಬಂತು.

ಮೂಡಣ ಬಾನನು
ನೋಡಿದರೊಮ್ಮೆಗೆ,
ಪಡುಗಡೆಯಲಿ ಕಣ್ಣಿಕ್ಕಿದರು,
ಮೂಡುವ ನೇಸರ
ಮುಳುಗುವ ಚಂದ್ರನ
ನೋಡುತೆ ತವಕವ ಹೊಂದಿದರು.

ಗಳಿಗೆಯ ಬಟ್ಟಲು
ವಂಚಿಸದೆಮ್ಮನು ;
ಹೊತ್ತೇರುವುದೋ ಮಿಾರುವುದು.
ಕರೆಯಿರಿ ಮಗಳನು
ಹಿರಿಯರೆ ! ದಿಬ್ಬಣ
ನೆರೆಮನೆಯಂಗಳಕಿಳಿದಿಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದುಮಗಳೆಲ್ಲಿಹ
ಳಯ್ಯೋ ಕಾಣಳು
ಹುಡುಕಿರಿ ! ನಡೆಯಿರಿ ! ತಳುವದಿರಿ.
ಕಿರಿಹೆಣ್ಣಲ್ಲವೆ ?
ನಾಚುತ ಮನೆಯೊಳೆ
ತಲೆಮರೆಸಿಹಳೋ ಶೋಧಿಸಿರಿ.

ಮದುಮಗಳಿಲ್ಲದ
ಮದುವೆಗೆ ವಾದ್ಯವೆ ?
ಊದದಿರೆಲೆಲೇ ಕಹಳೆಗಳ.
ದಿಬ್ಬಣ ತಿರುಗಲಿ !
ಮಗಳನು ಕಂಡರೆ
ಹೊರಿಸುವೆ ಭೂತಕೆ ಹರಕೆಗಳ.

ಇಂತಾ ಮುದುಕನು
ಬೊಬ್ಬಿರಿದಿರ್ದನು;
ಮದುವೆಯ ಮನೆ ಕಳಕಳಿಸಿತ್ತು.
ಹುಟ್ಟು ಹರಿಯೆ ಗುಮು
ಗುಮಿಸುತೆ ಹಾರುವ
ಜೇನ್ನೊಣಗಳ ಗಜಬಜೆಯಾಯ್ತು.

ಗೋಳಿಟ್ಟೆಂದನು :—
ಹೊನ್ನಿಯೆ ! ಜೀವವೆ !
ಕಣ್ಣೀ ! ಗತಿಯೇ ! ಬಾರಿಂದು.
ಮದುವೆಯು ಮಾಡೆನು
ಕಟ್ಟನು ಮಿಾರ್ವೆನು.
ಮೂಡಲೆ ಹೊಂಬಾಳೆಯ ಕಂದು !

Sri Vidyabharathi Book Centre, Sringeri

CC-O. In Public Domain. Digitized by eGangotri

ಮದುವೆಯೆನಲು ಹಿರಿ
ಹಿಗ್ಗುವರಲ್ಲವೆ
ನಿನ್ನೀ ಹರೆಯದ ಕನ್ನೆಗಳು ?
ತಿಳಿಯದೆ ಮಾಡಿದೆ —
ಕುರುಡನ ಬುದ್ಧಿಯು
ಕುರುಡಾದುದ ಮರೆ ! ಬಾ ಬಾಳು !

ಮಗಳೇ ! ತಂದೆಯ
ನುಡಿಯೆನೆ ದೆವ್ವದ
ನುಡಿಯೆಂದೇ ನೀ ಭಾವಿಸಿದೆ;
ಇದಿರಿದಿರಾಡುವ
ಪದ್ಧತಿಯಿಲ್ಲದೆ
ಇಂದೆನ್ನನು ನೀ ವಂಚಿಸಿದೆ.

ಎಲ್ಲವು ಕಪ್ಪಾ
ಯ್ತಲ್ಲವೆ ಹೊನ್ನಿಯೆ ?
ಮರುಮಾತಾಡುತ ಬಾರೀಗ
ಆರಾಗಲಿ ! ನಿ
ನ್ನಯ ಬಗೆ ಮೆಚ್ಚಲು
ಧಾರೆಯೆರೆವೆ—ಮೊಗದೋರೀಗ.

ಮಗಳಿನ ರೂಪವ
ನೋಡುವ ಭಾಗ್ಯವ
ಎಂದೋ ಕಳೆದಿಹುದೀ ದಿಟ್ಟಿ.
ಮಾತಿನ ದನಿಯೊಳೆ
ರೂಪವ ಕಂಡೆನು;
ಅದಕೂ ಬಂದುದೆ ಈ ತುಟ್ಟಿ ?

CC-O. In Public Domain. Digitized by eGangotri

ಮುನಿಸಿನೊಳಿರುವೆಯೊ ?
ನಾಚುತಲಿರುವೆಯೊ ?
ನುಡಿಯಿಲ್ಲದ ನಾಡಿಗೆ ನಡೆದು,
ಕಿವಿಗೂ ಕೇಳದ
ಸಂಚನು ಗೈದೆಯೊ ?
ನಿನ್ನದು ಹದನೇನೆಲೆ ಮುದ್ದು ?

*

ಮೊದಲೇ ಹೇಳಿದೆ
ವಲ್ಲವೆ ಕುರುಡರೆ !
ನಮ್ಮಾ ನಾಡಿನ ಭೂತಗಳು
ಕನ್ನಿಕೆ ಹೆಂಗಳ
ಮಾಸಲುಗೆಡಿಪುವು;
ಎಂದವಗೊರೆದರು ಗುಟ್ಟಿನೊಳು.

ಮದುವೆಯ ದಿನದಲಿ
ಮೂಡಿದ ನೇಸರು
ನಡುನೆತ್ತಿಗೆ ತಾನಡರಿದನು.
ಊರೂರಲೆದರು
ಸೇರಿದ ನಂಟರು;
ಕಂಡರೆ ಬಡವೆಯ ಹೊನ್ನಿಯನು ?

ಓಡುತಲೋಡುತ
ಎದೆ ತಿದಿಯೊತ್ತುತ
ನಿಟ್ಟುಸಿರಿಂದಲಿ ಬುಸುಗುಟ್ಟಿ
ಆಂಬಿಗನೊಬ್ಬನು
ಬಂದಿಂತೆಂದನು —
ನಂಬಿರಿ ! ನುಡಿವೆನು ಮನಮುಟ್ಟಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಯ್ಯಯ್ಯೊ ! ಮುಂ
ಜಾವದ ನಿದ್ದೆಯ
ಒಡಲನು ಬಗೆದದ್ಭುತವೊಂದು
ಕಂಡುದು ಕಣ್ಣಿಗೆ
ಸವಿಗನಸಿನ ಹಗೆ !
ಹೇಳಲು ನಾಲಗೆ ಸುಕ್ಕುವುದು.

ನೆರೆಮನೆಯೊಳೆ ಬೀ
ಡಾರವ ಮಾಡಿದ
ಎಳಹರಯದ ಚೆನ್ನನ ಕೂಡಿ
ಚೆಲು ಪುತ್ತಳಿ, ಸಿರಿ
ಗಣ್ಣಿನ ಪುತ್ರಿಕೆ !
ನಡೆದಳು ಮುಂದಕೆ ತೆರೆಗಾಡಿ,

ನಿಟ್ಟುಸಿರಿರ್ದುದೊ ?
ನಗೆ ಗಹಗಹಿಸಿತೊ ?
ತೆರೆಗಳ ದನಿಯಲಿ ಕೇಳಿಸದು.
ಕಂಬನಿಯಿರ್ದುದೊ ?
ಮೊಗ ಗೆಲವಿರ್ದುದೊ ?
ದೂರದಿ ಕಣ್ಣಿಗೆ ಕಾಣಿಸದು.

ಮಿಾವರೊ ಮುಳುಗುವ
ರೋ ! ನಾವರಿತೆವೆ ?
ಬಲೆ ಕಣ್ಣಿಯ ಹೆಣೆಯುತ್ತಿರಲು.
ದುಮುಕಿದರಾ ಕಡೆ —
ಪಡುಗಡಲಿನ ತೆರೆ
ಕುಣಿ ಕುಣಿದಾರ್ಭಟಿಸುತ್ತಿರಲು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗರ್ಜಿಸಿ ಗರ್ಜಿಸಿ
ಕಿರಿ ಹುಲ್ಲೆಯ ಮೇಲ್
ಹಾಯ್ದು ಬರುವ ಹೆಬ್ಬುಲಿಯಂತೆ
ಭೋಭೋರ್ಗರೆನ್ನುತ
ತೆರೆಗಳು ಹೊಡೆದುವು
ಗಾವುದ ದೂರಕೆ ಸಿಡಿವಂತೆ.

ಕಡಲೊಡೆಯನು ಮುನಿ
ದಿಹನಿಂದಲ್ಲವೆ ?
ಕಾಣದೆ ತೆರೆಗಳ ಕೊತ್ತಳವು ?
ಏರಿದೆ ಬಾನಿಗೆ !
ದೋಣಿಯ ಹರಿಯಿಪ
ಹದನೆಂತೋ ಆರಿಯೆವು ನಾವು.

ತೀರದೆ ನಿಂತೆವು
ದೂರದೆ ಕಂಡೆವು
ಕರ್ಮುಡಿ ಸುತ್ತಿದ ತಲೆಯೊಂದ;
ತಳತಳಿಸುವ ಹಣೆ
ಯೊಂದನು ಕಂಡೆವು;
ಅದುವೇ ಚೆನ್ನನ ಮೊಗದಂದ.

ಸಾವನು ನೋಡುತ
ಬೆದರುತ ನಿಂತೆವು
ನಾವೂ ಸಾವುದ ಮರೆತಿರ್ದು;
ಜೀವವ ಹಿಡಿದೆವು,
ಹಿಡಿದಾ ಜೀವವು
ಹಾರುವುದೆಂಬುದ ತಿಳಿದಿರ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಡೆಯರೆ ! ಎನಿತೋ
ಮಂದಿಯ ತಂದೆವು
ಕಡಲ ತೆರೆಗಳನು ಅಡಹಾಯ್ದು ;
ದೋಣಿಯ ಬಿಜ್ಜೆಗೆ
ಪಾಪವ ತಂದೆವು
ಇಂದೀ ಜೀವವ ಹಿಂದೊಯ್ದು.

ಹೇಳಿದುದಾರಿಗೊ !
ಕಣ್ಗುರುಡನ ಕಿವಿ
ಕಿವುಡಾಗಿರ್ದುದು; ಕಣ್ಣಾಲಿ —
ಕಳೆಗೆಟ್ಟಿರ್ದುದು; .
ತನುವಿನ ಮಿಡುಕವು
ಅಲ್ಲಿಯೆ ಸೇರಿತು ಶಾಂತಿಯಲಿ.

ಜೀವದ ಪುತ್ಥಳಿ
ಯನು ಹುಡುಕಾಡಲು
ಕರುಡನದೆಲ್ಲಿಯೊ ಮರೆಗೊಂಡ.
ಮದುವೆಯ ಹಂದರು
ಹಸುರಿನ ಮಂಡಪ
ಆದುದವರ ಮಸಣದ ಮಾಡ.

ದಿನಗಳು ಕಳೆದುವು
ನೆನಪಿನ ನಾಡಿಗೆ
ಒಯ್ದುವು ಹೊನ್ನಿಯ ಚಿನ್ನನನು.
ಹೊಸ ಹೊಸ ವರ್ಷದ
ಪರದೆಯನಿಕ್ಕುತ
ವಿಧಿಯದನೂ ಮರೆಮಾಜುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡಲತಡಿಯ ಮಳ
ಲೊಟ್ಟಿಲೊಳಿಂದೆಡೆ
ಕೇಳುವುದೊಮ್ಮೊಮ್ಮೆ ಕೂಗು.
ಸುಯ್ಯುವ ತೆರದಲಿ
ಹಲುಬುವ ತೆರೆದಲಿ
ಬಯ್ಯುವ ಹೊಯ್ಯುವ ದನಿ ಸೋಗು.

ಇರುಳ ಮೊದಲ ಮುಂ
ಜಾವದೊಳೊಮ್ಮೆಗೆ
ತಿಂಗಳು ಬೆಳಕಿನ ನೆಳಲಂತೆ.
ಏನೋ ಕಾಂಬುದು !
ಭೂತದ ದಂಪತಿ
ಅಲ್ಲಿ ನಲಿವುದೆಂಬುದು ವಾರ್ತೆ.

ಒಡಲ ನಡುವೆ ಜೀ
ವವು ಕುಣಿಯುತ್ತಿರೆ
ಆದರಳವನು ನೋಡುವರುಂಟೆ ?
ಸಾಯಲು—ಭೂತವು
ನಲಿವುದ ಕಾಂಬೆವು
ನಮ್ಮ ತೆರದ ಗಟ್ಟಿಗರುಂಟೆ ?

ಕಟ್ಟಳೆ ಕಟ್ಟಿತು
ಹೊನ್ನಿಯ ಚೆನ್ನನ
ತನುಗಳ ಹಿಡಿದೀ ನೆಲದಲ್ಲಿ.
ಕಟ್ಟಳೆಯುಂಟೇ ?
ಕಟ್ಟುಗಳುಂಟೇ ?
ನಡುಗಡಲಿನ ತೆರೆಯಾಳದಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾದ್ರಿಯ ಚಿತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾದ್ರಿಯ ಚಿತೆ

೧

"ಕಾಡಬಳಗದ ಸಸ್ಯ ಶಾದ್ವಲದ ಶಾಂತಿಯಲಿ
ತಲೆಗರೆದ ತತ್ವಗಳನರಸು;
ಬಾಳುವೆಯ ನಡುಹಗಲ ಕವಿವ ಚಿಂತೆಯ ಮುಗಿಲ
ತೊಲಗಿಸುತ ಕಂಬನಿಯನೊರಸು.—"

ತಿಳಿವೊಸರ ಚೆಲ್ಲುವರ ಸವಿನುಡಿಯ ಹರಕೆಯಿದು
ಬೀಗೆಗಳ ತಣ್ಪಿಸುವ ಮಾತು;
ನಂಬಿಕೆಯ ಬಿತ್ತು—ಅಳುವವರ ಬಾಯಿಗೆ ತುತ್ತು—
ತತ್ವ ಸೂತ್ರದಿ ಕೋದ ಮುತ್ತು.

ಎನಿತೆನಿತೊ ರಾಜ್ಯಗಳ ಕೈಯ ಕಡಿವಾಣದಲಿ
ಎಳೆದಾಡಿ ಆಂಕೆಯೊಳಗಿಟ್ಟು;
ಲೋಹ ಕವಚ ಬಿಟ್ಟು, ಕೀರ್ತಿ ಕವಚವ ತೊಟ್ಟು
ಮತ್ತೆ, ಮಹಿಮೆಯ ತೇಲಬಿಟ್ಟು—

ಪದಕೆ ಮಣಿದರ ಹಣೆಯ ಬೊಮ್ಮ ಬರೆಹವ ತೊಡೆದು
ಹೊಸತು ವಿಧಿಯನು ವಶಾಡಿಕೊಟ್ಟು—
ಲೋಕವಿಜಯದ ಸಾಕ್ಷಿ ಮಕುಟವನು ಧರಿಸಿದರು,
ಎದೆಯ ಗೆದ್ದರೆ ಶಾಂತಿಗೊಟ್ಟು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳೆಯ ಕತೆಯೆಂದು ಹೇಳುವೆವವರ ಕೂರಸಿಯ
ಹಳಸಿರುವ ಸುದ್ದಿಗಳನೆತ್ತಿ;
ಹರಿದ ರಕ್ತದ ಧಾರೆ—ಕವಿವಾಕ್ಯ ಧಾರೆಯಲಿ
ಸುರಿಯೆ, ಬುದ್ಧಿಗೆ ಮಾಯೆ ಮುತ್ತಿ,

"ಏನು ಸಾಹಸವೇನು ವೀರವಿಲಸಿತವಯ್ಯೊ !"
ಬಾಯಳಿಯಲಿಂತು ಹಾಡುವೆವು.
ಹಳೆಯ ಪಾಕಕೆ ಬಿರುದಿನೊಗ್ಗರಣೆಹಾಕಿ—ಇದೆ
ಕವಿಪಾಕವೆಂದು ಸವಿಯುವೆವು.

ವಾಣಿಗಿದೆ ಹಲವು ನಾಲಗೆ, ಹಲವು ರಸಗಳಿವೆ,
ಒಂದಲ್ಲವೊಂದೊಂದರೊಳಗು
ಇತಿಹಾಸ ತತ್ವ ವಿಧವಿಧ ಪುರಾಣಗಳೆಂದು
ಹೊಮ್ಮುತಿದೆ ಕವಿತೆಗಳ ಬಿಂದು.

ಕಾಲದಡವಿಯಲಿ ಮಡಿದವರ ಕತೆಗೊರಡಿನಲಿ
ಕಾಂಬುದದೊ ಕೊನರಿಡುವ ಕುಡಿಯು
ಗಾಳಿಯೂದಿದರು, ತನು ಕರಿಕಿದರು, ನಂದದೇ
ಕನಲುತಿರುವಾತ್ಮಗಳ ಕಿಡಿಯು.

ಆರಾದರೇನವರ ಒಳಬಾಳು ಬೇರಿಹುದು—
ಒರೆ ಬೇರೆ, ಒಳಬಾಳು ಬೇರೆ;
ಜೋಡಾಗಿ ಸೇರಿದರೆ ಒಂದಾಗಿ ತೋರವುದು,
ಆದರಂತೆ ಬಾಳುವೆಯ ಮೋರೆ.

ತನು–ಲೋಕ ವಿಜಯಕ್ಕೆ! ಮನ–ಮೂಕ ಸಂಕಟಕೆ!
ಆಹಹ! ಎಂತಹ ಬೆಸುಗೆಯಿವಕೆ!
ಚಿತ್ರಸಮರದಿ ಗೆದ್ದ —ನಿಮಿಷ ಶಾಂತಿಯ ಮೆದ್ದ
ಗಟ್ಟಿಗನೆ ಅವನರಸು ಜಗಕೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವರ ನುಡಿಗಲಿತ ಬಿರುದು ಗುಡುಗುಡಿಸುತಿದೆ
ಲೋಕವಾರ್ತೆಯ ಮೋಹರದಲಿ;
ಮೌನಿಗಳ ಮೂಕಹೃದಯಾವೇಶ ಭಾಷೆಗಳು
ಕೆತ್ತಿಹವು ಕಾಡಶಾಂತಿಯಲಿ.

ಅತ್ತವರ ಸತ್ತವರ ಸಾಯದಿಹ ನೆನಹುಗಳು
ಸುತ್ತುವುವು ಬಳ್ಳಿ ಜೊಂಪದಲಿ;
ಆಳಲಾಗಿ ನೆಲಲಾಗಿ ಗುಹೆಯು ಪಡಿನುಡಿಯಾಗಿ
ಕಾಣುತಿವೆ ಪ್ರಕೃತಿರೂಪದಲಿ.

ಹಕ್ಕಿ ಕಲಿವುದು ಹಾಡ, ಕಾಡಮರೆಗೊಂಡವರ
ಎದೆದನಿಯ ಬಿಂದುಗಳನೊಟ್ಟಿ.
ಚುಕ್ಕಿಯದೊ ಮಿರುಗುವುದು ವಿರಹ ಯಜ್ಞೇಶ್ವರನ
ನಾಲಗೆಯ ಕೆಂಗಿಡಿಯ ಮುಟ್ಟಿ.

ಜನರ ಕೈ ಗೈಮೆಗಳು ಬಾಳುವುವು ಕಣ್ಮುಂದೆ
ಬರೆದ ಭಿತ್ತಿಯ ಚಿತ್ರದಂತೆ.
ಕಳಿದ ಬಾಳಿನ ಬೇಗೆ—ಕನಸಿನೊಡವೆಯ ತೆರದಿ
ಮಾಯವಾಗಿದೆ ಸೃಷ್ಟಿಯೊಳಗೆ.

ಕಟ್ಟುವೆನು ಕತೆಯೊಂದ ಬನದ ಗವಿಯಿಂದಾಯ್ದು,
ಮರವೆಯಿಂದದನೆತ್ತಿ ಕೊಯ್ದು.
ಎದೆಯನಪ್ಪಲು ಮಣಿಯ ಮಾಲೆಗಟ್ಟುವ ತೆರದಿ
ಅಳಿವಿರದ ನೆನಹಿನಲಿ ಕೋದು.

ಅಚ್ಚಿರಿದ ಗಂಡು ಹೆಣ್ತನದ ಬೆಸುಗೆಯ ಬೇನೆ
ಹಲವಿಲ್ಲ! ಒಂದೆ; ಅನುಭವದ
ಜೀವಿಗಳು ಬೇರೆ—ವೇದನೆಯ ಮಿಡುಕವದೊಂದೆ
ಸುರಿದಿಹುದು ಬಿಡದೆ ಹೃದಯಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮ್ರಾಜ್ಯ ಚಿಪ್ಪೆಗಳ ಸೀಗುರಿಯ ಬೆಳ್ಗೊಡೆಯ
ಬೀಳ್ಕೊಂಡು ಏಕಾಂತದೊಳಗೆ
ಪಾಂಡು ಮಾದ್ರಿಯರ ದಾಂಪತ್ಯ, ವಿರಹಕೆ ಸಂದು
ಕೊಂದು ಕೂಗಿತು ಕಾಡನಡುವೆ.

ತಮ್ಮ ಹೆಸರಿಗೆ ಹೇಸಿ ಒಡೆತನಕೆ ಕೊಕ್ಕರಿಸಿ,
ತಮ್ಮಾತ್ಮವೇ ಶತ್ರುವೆನಲು,
ಮುಡಿಪುಗಟ್ಟಿದರು ಮುನಿ ಶಾಪಕ್ಕೆ ತಮ್ಮನುವ;
ನವೆದಿರ್ದರಲ್ಲಿ ಕಾಡಿನೊಳು.

ಅನುಭವವು ಸವಿಯಲ್ಲ–ಅದರ ನೆನಪೇ ಸವಿಯು,
ಅದ ಕದ್ದು ಮೇಯದೇ ಮನವು ?
ಆಗ ಮೂಸೆಯ ಚಿನ್ನದಂತೆ ನೀರಪ್ಪುದೆದೆ
ಕರಗುತಲ್ಲಲ್ಲಿ ಚಿಲ್ಲುವುದು.

ಕತ್ತಲೆಯ ಆಳದಲಿ ಗುಯ್ಯೆಂಬ ಗುಳುಗುಳಿಪ
ಬಿಂಜದಲಿ ಪಾಂಡುನೃಪನೊಮ್ಮೆ
ಹಲುಬಿದಾ ನುಡಿಯದನು ಕೇಳಿ ಕೊಟ್ಟಿತು ಭಾಷೆ
ಕನ್ನಡಕೆ ಮಿಾಸಲೆಂದೆನಿಸಿ.

೨

ಮುನಿಸು ಹೊಗೆ ಸೂಸುವುದೆ ಕಾನನದ ಮೌನದಲಿ?
ಮನವ ದಹಿಸುವ ಮೋಡಿ ದಳ್ಳುರಿವುದೇ ?
ಹುಸಿ ಬೆಸುಗೆಯಿಕ್ಕಿಹುದೆ ಎಳಲತೆಯ ಹಾಸದಲಿ?
ಕಟ್ಟು, ಬಣ್ಣದ ಬೆಡಗು ಮಿರುಗುತಿಹುದೆ?
ಜೀವನವನುಕ್ಕಿಸುವ ಕೀರ್ತಿ ಮದಿರಾನಂದ
ಕೋಗಿಲೆಯ ಕಲರವದಿ ಹೊಮ್ಮುತಿಹುದೆ?
ಸೃಷ್ಟಿಯಾ ಸೋಗಿಲಿದು; ಶಾಂತಿಯಾ ಬಾಗಿಲಿದು;
ಕವಡಿರದ ಬಾಳುವೆಯು ಹಂದರಿದುವೆ.

CC-O. In Public Domain. Digitized by eGangotri

ಆರಾರ ದೂರು ; ಮತ್ತಾರಾರ ನಿಟ್ಟುಸಿರು,
ಆರಾರ ನೀಳ್ದನಿಯ ರೋದನಗಳು ;
ಈ ದಡದಿ ವಿಷಮ ವೀಚಿಗಳ ತುಳಿದೆಬ್ಬಿಸವು
ಎದೆಯ ಕೊರೆಯದು ಕೊಚ್ಚಿ ಹರಿಯುವಳಲು.
ತನ್ನ ದೇಹವೆ ದೋಣಿ, ತನ್ನ ಶಕ್ತಿಯೆ ಹುಟ್ಟು,
ತನಗೆ ತಾನೇ ಕರ್ಣಧಾರನೆನಿಸಿ,
ತೇಲುತೇಲುತೆ ನಡೆದು ಎಂತೆಂತೊ ಸೇರುವೆವು
ಸಚ್ಚಿದಾನಂದ ಶಾಂತಿಯ ತೀರದಿ.

ಮಕುಟಧಾರಣವೊಂದೆ ಬಾಳುವೆಯ ತೋರಣವೆ?
ರಾಜದಂಡವನಲೆವುದೊಂದದೆ ಬಲವೆ ?
ಸೀಗುರಿಯ ತಂಗಾಳಿಯೊಂದೆ ಜೀವನದುಸಿರೆ ?
ಬೆಳ್ಗೊಡೆಯ ನೆಳಲೊಂದೆ ಸೊಗದ ತಂಪೆ ?
ಬಿನ್ನಣವ ಮಾರಿ ಬೆಲೆಗೊಂಬ ಹರದರ ಗಾನ
ಆತ್ಮಕ್ಕೆ ಜತಿಗೊಡುವ ತಾನವೇನ್ಯೆ ?
'ಜಯ !' ಎಂಬ 'ಜೀ' ಎಂಬ ಬೆಲೆಯಾಳ ಕಲಿತ ನುಡಿ
ಸಗ್ಗದಿಂ ಸಿಡಿವ ಸೊದೆ ತುಂತುರೇನ್ಯೆ ?

ಅರಸು ಗೆಯ್ಮೆಯ ಭರದಿ ಆತ್ಮತತ್ವವ ತಿಳಿವ
ಪರಿಯ ಮರೆವೆವು, ಮೊರೆದು ಗರ್ಜಿಸುವೆವು.
ರಾಜ್ಯಗಳನೊತ್ತೊತ್ತಿಗೆಲ್ಲವರೆ ಮೊಳಗಿಪೆವು,
ಬಗೆಗರಸನಿಹನೆಂಬುದನೆ ಮರೆವೆವು.
ಇಂತು ಗಳಿಸುವ ಬಾಳ ಆಳ್ಕೆಯೆಂಬರೆ ? ಹೇಳ !
ಪಚ್ಚೆ ಹಸುರಿನ ಹೊಲದಿ ಮೇವ ಮುಂದೆ
ಒಂದು ಗಳಿಗೆಯ ಮೇವ ತಿಂದು ಮರೆಯದೆ ಸಾವ ?
ಅದರಂತೆ ನಮ್ಮ ಬಾಳ್ ಮರವೆ–ಮಾಯೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನೆ ಕುಡಿಬಿಟ್ಟು ಚಿಗುರಿಟ್ಟು ಅರಲಾಗಿ ಮಿಡಿ
ಯಾಗಿ ಬಿಸಿಲುಂಡು ಕೆಂಪಾಗಿ ಬೀಗಿ,
ತೂಗಿ ತೆಂಬೆಲರಿಂದ ನಸುಜಗುಳಿ ತೊಟ್ಟಿಂದ
ಜಾರಿ ಬೀಳುವ ಹಣ್ಣಿನಂತೆ ಮಾಗಿ,
ಜೀವವಿದು ತನ್ನೊಳಗೆ ತನ್ನ ಮೌನವನುಂಡು
ತೀವಿ ರಸದಲಿ ಬಣ್ಣವೇರಿ ಮಿಂಚಿ,
ತನ್ನ ನೆಲೆಯನು ಕಂಡು ಸೇರಲದುವೇ ಬದುಕು ;
ಹಲವುದೋಹಳದಿಂದಲಾವ ಸೊಗಸು ?

ಬೆದರುವೆನು ಹುಸಿನಗೆಗೆ–ನಾಚುವೆನು ಘೋಷಣೆಗೆ,
ಕೂಳ್ಕುದಿವೆ ರಾಜತೆಯ ಬಲಕೆ ಚಲಕೆ
ಆಳೆಂಬ ಅರಸೆಂಬ ಭೇದದಿಂ ಗರ್ಜಿಸುವ
ಜಂತು ಜೀವನ ಬೇಡ ಜಗದ ಸೊಗಕೆ.
ಇಲ್ಲಿ ಹುಸಿಬೆಡಗಿಲ್ಲ—ವಂದಿಗಳ ಮೊರೆಯಿಲ್ಲ—
ಘನಮಾರ್ಗದಿಂ ಬಿದ್ದ ತುಂತುರಂತೆ
ಸೃಷ್ಟಿದೇವಿಯ ಮಡಿಲೊಳಿಪ್ಪ ಸುಖಗಳ ಪಡೆದು
ಬಿದ್ದೆಡೆಯೊಳಾರಿ ಕಣ್ಮರೆಯಪ್ಪೆವು.

ಈ ಕಾಡು ನಾಡಿನಿಂ ಹಲವುಪಡಿ ಮಿಗಿಲೆನಗೆ ;
ಗುಳುಗುಳಿಪ ನಿರ್ಝರವೆ ನನ್ನ ವಂದಿ.
ಜೀವ ಭೇದವ ಹುಡುಕದೊಂದೆ ನೆಳಲಿನೊಳಿಡುವ
ಎನ್ನ ಬೆಳ್ಗೊಡೆಯೆ ಆಗಸದ ಪರಿಧಿ.
ಮಾಮರದ ಜನ್ಮದಲಿ ಕೆಂಪೇರುತಿಹ ಕೊನರೆ
ಜಸವನುಗ್ಗಡಿಸುತಿಹ ವಿಜಯಕೇತು.
ಆನಂದ ಸಾಮ್ರಾಜ್ಯ ; ನಾನೋರ್ವನೇ ರಾಜ;
ಮೃಗಗಳೇ ಪಕ್ಷಿಗಳೆ ಎನ್ನ ಜನರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಮ್ಮೊಮ್ಮೆ ಬಳ್ಳಿಮಾಡದೊಳೆ ಒಡ್ಡೋಲಗವು ;
ಅಳಿಗಳಾ ಕೋಗಿಲೆಯ ಗೀತವೊಮ್ಮೆ.
ಮುಗುಳುಗಳ ಕುಸುಮಗಳ ಕಪ್ಪಕಾಣಿಕೆಯೊಮ್ಮೆ ;
ಚಿಗುರುಗಳ ಕವಲುಗಳ ಕೇಲಿಯೊಮ್ಮೆ.
ಒಮ್ಮೊಮ್ಮೆ ಮಧುರ ಮಾಸಗಳ ಮೃದುಲಾಸ್ಯಗಳು ;
ಮಳೆಯ ಗಾಳಿಯ ತಾಂಡವಂಗಳೊಮ್ಮೆ
ಆವುದಿದೆ ತಪ್ಪ ? ಇನ್ನಾವ ಸಾವಿನ ಮುಪ್ಪ ?
ಈ ಕಾಡೆ ಸ್ವರ್ಗನಂದನವಲ್ಲವೆ ?

*

ಒಂದೆಣಿಕೆ ಗಡಿಯಿಂದಲತ್ತ ವೈರಾಗ್ಯವದು
ಧರಿಣಿಯಲಿ ಬೇರೂರಿ ಮಡಲಿಟ್ಟಿದೆ
ಪರಲೋಕದತ್ತ ; ಬೇರೊಂದೆಡೆಯೊಳದೊ ಇಹದ
ಭವದ ಭಾವದ ಬಯಕೆ ಕವಲಿಟ್ಟಿದೆ.
ಬಗೆ ಬಗೆಯ ಮುಗುಳು ಗೊಂಚಲಿನ ಹೂಜಲ್ಲಿಗಳ
ಕಣೆಗೊಟ್ಟು ಮನವ ಮೋಹರಿಸುತ್ತಿದೆ;
ವಿರಹಿಗಳ ಮರುಳು ಮಾಡುವ ಕೊಂದು ಕೂಗುವಾ
ಸಮರ ಸನ್ನಾಹವಲ್ಲವೆ ಸೃಷ್ಟಿಗೆ ?

ಬರುತಿಹುದು ಬರುತಿಹುದು ಸಂಸಾರಸಾರಗಳ
ಮಸಗಿ ಹೀರಿದ ನೆನಪು ಸುಖದ ನೆನಪು,
ಅನುಭವದಿ ಮಸೆಮಸೆದು ಥಳಥಳಿಸುವಾ ನೆನಪು,
ಜೀವಗೊಲೆ ಮಾಡಲೇಕಡಿವ ನೆನಪು.
ಎಲ್ಲಿ ಸಂಸಾರ ! ಸಂಸಾರವಲ್ಲಿಯ ಬೇರು !
ಕುಸುಮ ಕೋಮಲೆಯಸಿಯನಳಿವತೋಳು ?
ಎಲ್ಲಿ ಬೇಟದ ಬಿತ್ತು ! ಸವಿಯ ನಲ್ಮೆಯ ತುತ್ತು !
ಎಲ್ಲಿ ನಲ್ಮೆಯ ತುಟಿಯ ಕೋದ ಮುತ್ತು ?

Sri Vidyabharathi Book Centre, Sringeri

CC-Q. In Public Domain. Digitized by eGangotri

ಜೀವವೊಂದೊಡೆದೆರಡು ಕವಲಾದ ನಂದನರ
ಪಲ್ಲವಾಧರದರಲುನಗೆಯದೆಲ್ಲಿ ?
ಎಲ್ಲಿ ಬಾಗಿದ ಮೊಗದ ಹೊಡಕರಿಪ ಹುಬ್ಬಿನಲಿ
ಕೆಚ್ಚುಗೊಂಡಾ ನೋಟ—ಮಿಂಚು ಬಳ್ಳಿ ?
ತುಂಬು ಜವ್ವನದಿ ತುಂಬಿದ ನುಡಿಯ ಸಿಂಗರದ
ಕೆಂಬಿಸಿಲ ಕೆತ್ತನೆಯ ಹಾಸವೆಲ್ಲಿ ?
ವಿರಹದಲಿ ದೊರಕುವುದೆ ಕಾಡಿನಲಿ ಕಾಣಪುದೆ ?
ಎನ್ನೆರೆಯಳೀವ ಸರಸದೊಳಲ್ಲದೆ ?

ಕೆಡೆ ನುಡಿಯೆಲೇ ಕವಿ ! ಅಲಂಕಾರಗಳ ಹೊಸೆದು
ನುಡಿಯ ಮೋಹಕೆ ನಿಜವ ಮರಸು ಮಾಸು !
ಜರೆಯೆಲೇ ತಾತ್ವಿಕನೆ ! ಮೋಡಗಳ ಮೇಲೇರಿ
ಜಡತೆಯಲಿ ಬೀಳ್ನುಡಿಯ ಮಳೆಗರೆಯಿಸು.
ಭವವೆ ಸಾಗರವಿರಲಿ ! ತೆರೆ ಮಸಗಿ ಗರ್ಜಿಸಲಿ !
ಜೀವನದ ಕಾನನದ ತೊರೆ ಹರಿಯಲಿ !
ಅವ ನಿಂದೆಗಳಿರಲಿ ! ಅವ ಬಂಧಗಳಿರಲಿ !
ಕಷ್ಟವೇ ಸಂಸಾರ ? ಅದುವೆ ಬರಲಿ !

ಗಳಹುವರ ದೂಷಣೆಗೆ ಬೆದರಿಯೆದೆನೆರೆಯವರ
ಉಳಿದು ಜಾರುವ ಜನರೆ ! ಜಾರಿರತ್ತ !!
ನೋಯಲಿದೆ, ನವೆಯಲಿದೆ, ಸಂಕಟದಿ ಸವೆಯಲಿದೆ,
ಎಂದು ದೂರುವ ಜನರೆ ! ತೊಲಗಿರತ್ತ !
ನಿಮಗಲ್ಲ ಸಂಸಾರ ! ನಿಮಗಲ್ಲ ಸುಖಸಾರ !
ನಿಮಗೆ ಕಗ್ಗತ್ತಲೆಯ ಗೂಡು ಕಾಡು.
ದುಗುಡವನು ಸುಖದ ಪಾಕದಲೆರೆದು ಸವಿಯುತಿಹ
ರಸಿಕರಿಗೆ ಬಾಳು, ಬಾಳುವೆಯ ಪಾಡು.

CC-O. In Public Domain. Digitized by eGangotri

ಸುಗ್ಗಿ ಕುಣಿಯುತ ಬಂತು–ಬಗ್ಗಿ ಮಾಮರ ನಿಂತು
ಹಿಗ್ಗುತಿದೆ ಕಮ್ಮಲರ ಮಕುಟವಾಂತು.
ನೋಡಲಾಗದೆ ? ತುಂಬಿ ಗಾನರಸದಿಂ ತುಂಬಿ
ನಾಡಿಗೋಕುಳಿ ಮಾಡುತಿರುವುದಿಂತು.
ಚಿತೆಯ ಬೂದಿಯ ಕೆಂಡದೊಳಗು ಪ್ರೇಮದಖಿಂಡ
ಸೌಂದರ್ಯವೇ ಕಿಡಿಯ ಸೂಸುತಿಹುದು.
ಮುಗ್ಗಿ ಮುದುರಿತು ಮಾಗಿ ಚೈತನ್ಯವನು ನೀಗಿ
ಹೊಸತನದ ಋತುವಿನಲಿ ಮರೆಯಾದುದು.

ತರಗೆಲೆಯ ಮೆಯ್ಯಾಂತು–ಚಳಿ ಗಾಳಿಯುಸಿರಾಂತು
ಹಿಮದ ತುಂತುರ ನೆತ್ತರಾಂತು ನೋಂತು,
ಹಲಗಾಲದಿಂ ನೊಂದ ಶಿಶಿರ ಮರವೆಗೆ ಸಂದ
ಬರುವನು ವಸಂತ ಮಾಧವಿಯ ಕಾಂತ.
ಇನ್ನೆಲ್ಲಿ ವೇದಾಂತ ! ಇನ್ನೆಲ್ಲಿ ಬೋಧಾಂತ !
ಇನ್ನೆಲ್ಲಿ ಮುನಿಯ ಮೌನದ ಸಾಧನೆ !
ಪ್ರೇಮ ವಿಜಯದ ಸಿಂಹನಾದವನು ಮಾಡುತ್ತ
ಕುಕಿಲುತಿಹ ಕೋಗಿಲೆಯದೋ ಕಾಣದೆ ?

ಸೃಷ್ಟಿಯಿಂತುತ್ಸವದ ಗೊಟ್ಟಿಗುಣಿತದೊಳಿರಲು
ಎನ್ನ ಜೀವನವೊಂದು ಮೌನವಾಂತು
ಕಾಡ ಮೂಕತೆಗೊಂಡು, ಗವಿಯ ಕತ್ತಲೆಯುಂಡು,
ಆವ ತಾಳಕೆ ಮೇಳಕೊದವದಾಯ್ತು.
ಮನಕೆ ಕೂರಲಗಿಟ್ಟು ಹೊಡೆವಳಲ ಗಾಯಕ್ಕೆ
ಎನ್ನ ಮುಗುದೆಯ ಸವಿಯೆ ತುಟಿಯ ಮದ್ದು.
ಅದುವೆ ದೊರಕದು ನನಗೆ ! ದೊರಕಿದರು ನಂಜದುವೆ !
ಆಹಹ ವಿಧಿಯೇ ನಂದುತಿಹ ಜೀವಿಗೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತು ಮರೆತಗೆ – ಪ್ರೇಮವೇನು? ತಿಳಿಯದ ಪಶುಗೆ
ಪ್ರೀತಿಗಳ ಸಂಕಟಕೆ ಹೆದರಿ ಮುದುರಿ,
ಆತು ತರಗೆಲೆಯ, ಕಿತ್ತಡಿಯ ವೇಷವ ತಳೆಯು–
ವಾತಗೇ ಕಾಡು ಸಿರಿಮನೆಯಪ್ಪುದು.
ಆರ ಬಗೆ ಹಣತಿಗೆಯೊಳಾಗಾಗ ಕೂರ್ಮೆ ಕುಡಿ
ಹೂವಿನಂತರಳುವುದು ಗರಿಕುತಿಹುದು,
ಕಿಡಿಗೆದರಿ ಹಾರುವುದು: ಹಾರಿ ಹೊಗೆ ಕಾರುವುದು,
ಪ್ರೇಮ ಪೂಜಕಗೆ ಕಾಡಾವ ಸೊಗಸು ?

ಅಲ್ಲಲ್ಲಿ ಕುಪ್ಪಳಿಸಿ ಚೀರಿ ಹಾರ್ವುದು ಹಕ್ಕಿ
ಹೊದರಹದರಿಂ ಲಲ್ಲೆ ನುಡಿಯ ಕೇಳಿ;
ಹಸುರು ಹಸಲೆಯ ಮೇಯುತಿದೆ ಮಂದೆ ನಲವಿಂದೆ
ಆವುದೋ ಸವಿಯ ಕಂಡಾ ಹುಲ್ಲಲಿ.
ಪ್ರಯಣ ಮುಗ್ಧನದೋರ್ವ ಮುಗುಳ ತೊಡವುಗಳಿಟ್ಟು
ಬಳ್ಳಿಹೆಣ್ಣಿನ ಮನವ ಸುಲಿಯುತಿಹನು.
ಪೆರನೋರ್ವನೆನ್ನಂತೆ ಮುಗಿಲ ಮರೆಯಲಿ ನಿಂತು
ಒಮಕಣದಿ ತನ್ನೆದೆಯ ಕರಗಿಸುವನು.

ಮೆಯ್ಗೊಂಡ ಯೌವನಕೆ ಮುಪ್ಪೊಂದೆ ಸಿರಿ ಮುಡಿಯೆ ?
ನಲ್ಲೆಯಳ ಕೂಟವದು ಹಗಲ ಕನಸೆ ?
ಇನಿಯರಪ್ಪಿಗೆ ಹುರುಡುಗೊಂಬುದುಂಟೇ ದೈವ?
ಕರುಬುವಾ ದೈವಕಿನ್ನಾವ ಪೂಜೆ ?
ಮುನಿಗೆ ಮುನಿಸುಂಟೆ ? ಮುನಿಹರಿಣ ವೇಷವ ಧರಿಸಿ
ವಿಷಯಗಳೊಳೋಲಾಡಿ ತಿರಿವನೆನಲು
ಸಿರಿಯಾಳ ಸೊಗದಾಳ ಮೋಹಕಿನ್ನೆನಿತಾಳ ?
ಅದನೆ ವಿಧಿ ಗುರಿಮಾಡಿ ಹೊಡೆಯಬಹುದೆ ?

CC-O. In Public Domain. Digitized by eGangotri

ಅಂದು ಚೈತ್ರಾನಿಲನ ಬೆಂಬಳಿಯ ಸಂದಾನು
ಕಾಡೊಳಲೆದಾಡಿದೆನು ಬೇಟೆಯೆಂದು.
ಬಳ್ಳಿಬಳ್ಳಿಯಲಿ ತರುತರುಗಳಲಿ ಕೆಂದಳಿರ
ಗೂಡಾರಗಳ ಕಟ್ಟಿ ದಾಳಿಗೊಂಡು,
ನನಿಕೊನೆಯ ಮೊನೆಮಾಡಿ ಮಸುಗುತಿರೆ ಮನ್ಮಥನು
ಹೃದಯವೆತ್ತೆತ್ತಲೋ ಹಾರಿ ಚೀರೆ,
ಹೆದೆಯೇರಿಸಿದೆ ಬೇಟೆಗೆಂದು, ಬೇಟವ ಕೊಂದು
ಸುಖಕಿಲ್ಲ ಕೊನೆಯಿರದ ಹೊಲೆಮಾಡಿದೆ.

ತವಸಿಯೋರ್ವನು ಕಾಡಬೆಳ್ಳಿರಲೆಯಂದದಲಿ
ವೇಷವನು ಪಲ್ಲಟಿಸಿ, ಮುಗುದತನದ
ಹುಸಿಮುಸುಕ ಧರಿಸುತ್ತ, ನಲ್ಲೆಯೊಡಗೂಡಿದನು
ಬಳ್ಳಿಮಾಡದ ಹೊದರೊಳೊಂದಿ ಮರೆಯ.
ಆಕಟಕಟ ! ಎನ್ನ ವಿಧಿ ಕೊಡಲೆನಗೆ ಕೆಡುಗಣ್ಣ —
ನಿಜವ ಮರಸುವ ಕುರುಡುಗಣ್ಣನಂದು
ಕಾಳಕೂಟದ ಕೊಡವನೊಡೆದು ಮೆಯ್ಸುಡಿಪಂತೆ
ಎಸೆದು ಕೂರಲಗ ಶಾಪವಕೊಂಡೆನು.

ಎನಿತು ಬಾಣದ ಕೊರ್ಬು ? ಅರಸುಗೈಮೆಯು ಜರ್ಬು ?
ಧರಣಿಯರಸಾಳಿಕೆಗೆ ಸೂರೆಹೋಯ್ತೆ ?
ಜಡದೇಹವರಸನಾಳಿಕೆಗೆ—ಅಂತಃಕರಣ
ಒಡೆಯನಾಳಿಕೆಗೆ ಬಾಳಿಕೆಗಲ್ಲವೆ ?
ಅಧಿಕಾರ ಸುರೆಯ ಕುಡಿಯದ ಮುಗ್ಧ ಜೀವಿಗಳ
ಮೃಗವಾಗಿ ಮೆರೆಯಿಪನು ಪಡೆದ ತಂದೆ.
ಬನದೊಳಗು ವಿಜಯ ಲೋಭವೆ ? ಮೃತ್ಯುಕೇಲಿಗಳೆ ?
ಆರ ತಲೆ ಹೊಣೆಯೆಂದು ಬಾಣವೆಸೆದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಲ್ಲ ಮೇಯುವುದೊಂದು, ಹಾಡಿ ನಲಿಯುವುದೊಂದು
ತನ್ನ ನುಡಿಯೊಳಿ ತೊಂಡುಗೆಡೆವುದೊಂದು;
ಸೃಷ್ಟಿಸೌಂದರ್ಯಕ್ಕೆ ಗರಿಗೆದರಿ ಕೊಡೆ ಹಿಡಿದು
ವಿಧಿಯ ಹೆಮ್ಮೆಗೆ ಮಕುಟವಿಡುವುದೊಂದು;
ಪರಿಪರಿಯ ರೂಪದಲಿ ಮೆರೆವ ಮಿಗ ಹಕ್ಕಿಗಳ
ಹೃದಯಾಂತರಾಳದಾನಂದವೊಂದೆ
ಆಲ್ಲಿ ಮಿನುಗುವ ಸೊಡರ ಕಿಡಿಯೊಂದೆ, ಕುಡಿಯೊಂದೆ,
ಎಂದು ತಿಳಿದರೆ ನರರ ಬಾಳ್ಗೆ ಕುಂದೆ ?

ಒಡಲು ಬೇರಾಗಲಿನ್ನದರಳತೆ ಬೇರಾಗೆ
ಅದರೊಪ್ಪ ಬೇರಾಗಿ ಮಿರುಗಲೇನು ?
ಸುಖಿವ ದುಃಖಿವ ಹಿಡಿವ ಹೃದಯ ಯಂತ್ರವದೊಂದೆ
ಅದರೊಳಗಣಂದೇಳ್ವ ನಾದವೊಂದೆ.
ಒಂದೆ ಆಚ್ಚಿನ ಜೀವ—ಹಲವು ರೂಪದ ಕಾಯ,
ಬಿಸುವ ಕರ್ಮದ ರಚನೆಯೆಲ್ಲವೊಂದೆ.
ವಿಷಯ ವಿಷಯದಿ ಸುತ್ತಿಸುವ ಮನೋರಥವೇಗ
ಹಿರಿಯ ಜನ್ಮಕು ಕಿರಿಯ ಜನ್ಮಕೊಂದೆ.

ವೇದ ವೇದಾಂತಗಳ ಹೀರಿ ಬಳೆಯುವುದಾತ್ಮ;
ಇಹದಾಸೆಯನು ಮೇದು ತಿಂಬುದೊಡಲು,
ಎರಡಕೊಂದೇ ತುತ್ತ ಕೊಡುವ ನಿಶ್ಚಲಚಿತ್ತ
ಮನಕೆ ಬಳಿವಳಿಯಾಗಬಹುದೆ ? ಹೇಳು.
ಪರದ ಸಾಧನೆಗೆ ತಲೆದೆತ್ತ ಮುನಿಯಾದರೂ
ಉರಿವ ವಿಷಯದ ಕೊಂಡದೊಳಗೆ ಬಿದ್ದು
ಸೀತುಹೋಗುವನು, ಗರಿಸುಟ್ಟು ಸಿಡಿಮಿಡಿಗೊಂಡು
ಕೊರಗುವನು ಮತ್ತದುವೆ ದುಗುಡವೆಂದು.

CC-O. In Public Domain. Digitized by eGangotri

ಆಸೆಗಾವುದು ಮರ್ದು ; ಆದರ ತೀರ್ಕೆಯ ಹೊರತು?
ತೀರದಾಸೆಯ ಭೂತ ಹಲವು ಭವದಿ
ಜೀವಗಳ ಬೆಂಬತ್ತಿ ಕರ್ಮದಲಿ ಕುಣಿಯಿಪುದು ;
ಅದಕೆ ಮುನಿಯಾದರೂ ಬೆದರಬೇಕು.
ಅಯ್ಯಯ್ಯೋ ! ಆಸೆ ಬಾಳ್ಗೊಲಿಗೆಯ್ದೆಯಲ ನೀನು !
ಸಂಸೃತಿಯ ಸವಿಯ ಕಹಿಯೆಂದು ಬಿಟ್ಟು
ತಾನೆಂದೊ ತೀರುತಿರ್ದುದು ಜೀವ ! ಅದನಿಂತು
ಕೆಡೆಯಿಸಿದೆ ಆಳಿಯಾಸೆಗಳ ನೆಳಲಲಿ.

ಕನಲು ಕೆಂಡಕೆ ನೀರ ಹೊಯ್ಯಲದರುಮ್ಮಳವು
ಎನಿತೆಂದು ಬಲ್ಲೆವೇ ? ಜ್ವಲಿಸುತಿರುವ
ಪ್ರಣಯವನು ಹೊಡೆದು ನಂದಿಸುವೆನೆಂದೀ ಕೊಲೆಗೆ
ಮನವ ಮಾಡಿದ ಧೂರ್ತ ! ಇದರನುಭವ
ಬಾರದಿರುವುದೆ ನಿನಗೆ ? ಇಲ್ಲದಿರೆ ದೊರೆವುದದೊ
ನೀನೆ ಈ ವೇದನೆಗೆ ಸಿಲುಕಿ ಸುತ್ತಿ
ಜಾನವಿಲ್ಲದೆ ಕೂಡುವಂದು ನಲ್ಲೆಯ ಮುತ್ತೆ
ಬೆಳಿಯಿಪುದು ನಿನ್ನಳಿವನುತ್ಸುಬಿತ್ತಿ.

ಬೇಗೆಯಲಿ ಬೆಂದು ಕುದಿಕುದಿಯುತಿಹ ಬೇಟವಿದು
ಹೊಗೆವುದಿದೊ ನಿನ್ನ ಚಿತೆಯಗ್ನಿಯಂತೆ.
ಮಾಗಿದಾವರೆಯಂತೆ ಕೊರಗಿದೆನ್ನಯ ಭಾಷೆ.
ಒದರುತಿದೆ ಮಸಣದಾ ಮಂತ್ರದಂತೆ.
ಎನ್ನ ನೀರೆಯ ತುಟಿಯ ಬಾಡಿಬಿದ್ದಾ ಮುತ್ತು
ನಿನ್ನ ಅಸುಹೀರ್ವ ಮೃತ್ಯುವಿನ ಬಿತ್ತು.
ಮೃತ್ಯುವಿನ ಮುಂದೆ ಆಳೆಂದು ಅರಸೆಂದಿದೆಯ ?
ನಿನ್ನ ಬಾಳುವೆಯಾತಗೊಂದೆ ತುತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬರುವ ಸೊಗಗಳ ಬರುವ ತರುವ ಸುಗ್ಗಿಯ ಬರವ
ಬರಿದೆ ಹಾರೈಸುವರೆ ವಿರಹಿಜನರು ?
ಎಂದೆಂದೊ ಕೂಡಿ ಆಗಲಿದ ನೆನಹು ಅವರೆದೆಯ
ತಂದು ಕೂಡಿಪುದು ರಸಕೇಲಿಗಳೊಳು.
ಆವರ ಬೇಟೆಗೆ ಬಂದು ಕೊಂದು ಕೊಲೆಮಾಳ್ಪವಗೆ
ಮುನಿಯದೇ ಧರೆಯ ಸೌಭಾಗ್ಯವೆಲ್ಲ ?
ಹಿಮದ ರಾಶಿಯ ವಿಭವ—ನಿನ್ನ ರಾಜ್ಯದ ವಿಭವ
ಕರಗದೇ ಆಳಲ ಬೆಂಕಿಯ ಸನಿಹದೆ ?

ಸುಗ್ಗಿ ಮೊರೆಮೊರೆವಂದು ತುಂಬಿ ಜೇಂಕರಿಪಂದು
ಮೊಗ್ಗೆಯದು ಬಿರಿದೆದೆಯ ಬಿಚ್ಚುವಂದು,
ಹಿಗ್ಗಿ ಕೋಗಿಲೆ ಹಾಡಿ ಕಾದಲರ ಕರೆವಂದು,
ಬುಗ್ಗೆ ಬುಗ್ಗೆಯಲಿ ರಸವೊಸರುವಂದು,
ನಲ್ಲೆಯರ ತೋಳ್ಗಳೇ ಶರಣೆಂದು ಜನರೆಲ್ಲ
ಅಲ್ಲಲ್ಲಿ ಹಂಬಲಿಸಿ ಸಂಭ್ರಮಿಸಲು
ಎಲ್ಲಾದರೂ ನಲ್ಲೆ ಸವಿದುಟಿಯ ಹೀರಿದರೆ
ಕಲ್ಲಾಗಿ ಬೀಳ್ವ ಮೃತ್ಯುವ ಪದದೊಳು.

ಆದರೇನರಸೊಂದು ಕಾಡಗವಿಯಲಿ ಮನೆಯ
ಎಂತಾದರೂ ಪೊರೆಯೊ ನಿನ್ನ ಬಾಳ.
ವಿಧಿ ಕೊಟ್ಟ ಹರೆಯಕ್ಕೆ ಅಡ್ಡ ಬಂತೆನ್ನವಿಧಿ ;
ಮುನಿಯ ಶಾಪದಿ ಕಂಡರುಂಟೆ ತೊದಲ ?
ಪುಣ್ಯ ಜೀವಿಗಳ ಹೊರೆಯುವ ಕೆಲಸ ದೇವರಿಗೆ–
ಪಾಪಿ ಜೀವನ ಕಾಲ ಜವನಕಾಲ ಮೆಟ್ಟು.
ಅಯ್ಯಯ್ಯೊ ! ಅವನ ತುಳಿತಕೆ ಕೊರಲನೊಪ್ಪಿಸುತ
ಸಾಯದಂದದಿ ಬನದಿ ತಲೆಯ ಮರಸು.

*

CC-O. In Public Domain. Digitized by eGangotri

ಮುನಿ ಶಾಪವಿಂತು ಬಾಳುವೆಯು ಕತ್ತಲಿಸಿದುದು.
ಮುಪ್ಪಿನಲಿ ಗುಹೆಯೊಳಗೆ ನವೆಯಬೇಕೆ ?
ಹೆರರೆಂತು ತಮ್ಮ ವೈಭವವ ಭಂಡಾರಗಳ
ಕಾವರಂತಾನು ತಲೆಗಾಯಬೇಕೇ ?
ಪರರ ಸುಖಗಳ ಲೀಲೆಗಳನು ಕಂಡೆದೆತಿದಿಯು
ಒತ್ತಿ ಬಿಸಿಯುಸಿರ ಸುಮ್ಮನೆ ಸೂಸಲೆ ?
ಬದುಕಿನೊಂದೇ ಆಸೆ—ಬೇರಾವ ಬಯಕೆಯಿದೆ ?
ಮುಪ್ಪು ಸಾವುಗಳೇಕೆ ಬಾರವಿಂದೆ ?

ಎನ್ನ ದೇವರ ಗುಡಿಗೆ ನಂದಿದಾಸೆಯು ದೀಪ;
ನಿಟ್ಟುಸಿರ ಮಂತ್ರ ; ಉಮ್ಮಳದ ತಂತ್ರ ;
ಕೈ ಮುಗಿದು ಕರೆದರೂ ಬಾರದಿಹ ಸೌಖ್ಯಗಳ
ನೆನಪದುವೆ ವಿಾಸಲಾಗಿಟ್ಟ ಕುಸುಮ ;
ಮೌನದಲಿ ಜಾನ, ಕಣ್ಣೀರಿನೊಂದಭಿಷೇಕ ;
ಹೊಗೆವೆದೆಯ ಕರ್ಪೂರದಾರತಿಗಳು ;
ವೇದ ತತ್ವಗಳ ನಿರ್ಮಾಲ್ಯ—ಉಳಿ ಬಾಳುವೆಯು
ಒಂದೆ ಮೃತ್ಯುವ ಮೂರ್ತಿ ಪೂಜೆಯಹುದು.

೩

ಶತಶೃಂಗ ಪರ್ವತದ ತಪ್ಪಲಿನ ವನಗಳಲಿ,
ಹುಲ್ಲೆ ಕಡವೆಗಳ ನಿಷ್ಕಲ್ಮಷದ ಮೇಲನದಿ,
ಹರಿವ ನಿರ್ಝರದ ನಿರ್ಮಲ ಜಲ ಸ್ನಾನದಲಿ,
ಹಣ್ಣು ಕಾಯ್ಗಳ ಬೇರುಗಳ ಮಧುರ ಭೋಜನದಿ,
ಕಾಲವನು ಕಳೆಯುತಿರ್ದನು ಪಾಂಡು ಭೂಪಾಲ.
ನಗುವನಾದರೆ ನಗೆಗೆ ಗೆಲವಿಲ್ಲ ; ಕಂಬನಿಯ
ಸುರಿವನಾದರೆ ಸರಿಗೆ ಕೊನೆಯಿಲ್ಲ ; ಗೆಳೆತನವ
ಬಯಸುವನೆ ? ಕಾಡಿನಲಿ ಮೊಳೆವ ಗೆಳೆತನವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳೈವರು, ಸತಿಯರೀರ್ವರಾ ಬನದಲ್ಲಿ
ಬೆನ್ನು ಬೆನ್ನೊಳೆ ಬಂದು, ಬಳಿಯೊಳೇ ನಿಲ್ಲುವರು ;
ಪರ್ಣಶಾಲೆಯನೆ ಅರಮನೆಯೆಂದು ಭಾವಿಪರು ;
ತಮ್ಮರಸನೆಡೆಯೆ ಸುಕ್ಷೇತ್ರವೆಂದೆಣಿಸುವರು ;
ದೂರದಿಂ ನೋಡಿ ಮೌನದೊಳೆ ವಂದಿಸುತಿಹರು ;
ಕಣ್ಣೀರ ಹನಿಯೊಳೇ ನಲ್ಮೆಯನು ತುಂಬಿಹರು ;
ಒಡನಾಡೆ ಮಾತಾಡೆ ನೋಂಪಿ ಕೆಡುವುದೆನುತ್ತೆ
ಕಣ್ಣಬೊಂಬೆಯೊಳವನ ಸೆರೆಹಿಡಿದು ಕೂಡುವರು.

ಶಾಪವಿಂತಿಹುದೆಂದು, ಆದರರ್ಥವಿಂತೆಂದು,
ನಾಟಿಸಲು ಬಹುದು ಹೆರವರ ಮನಕೆ ; ಪಾಂಡುವಿನ
ಆತ್ಮಾಂಕುರಗಳಂತೆ ಮೂಡಿರುವ ಸವಿತೊದಲ
ಬಾಲಕರಿಗಾವರ್ಥ ಮಾಡಿ ಕಲಿಸಲುಬಹುದು ?
ನಾಲಗೆಯೊಳಿನ್ನು ವಾಣಿಯು ಪದವನಿಟ್ಟಿಲ್ಲ;
ಎದೆಯಿನ್ನು ಎಸಳೆತ್ತಿ ಕಂಪುಗಳ ಬಿಡಲಿಲ್ಲ ;
ಮೆಯ್ಗೆ ಅನುಭವದಕೋಡುವ ಗಾಳಿ ಸೋಕದಿದೆ.
ಸಂತಸದ ಬುಗ್ಗೆ ನಗೆಯೊಳಗೆ ಗುಳುಗುಳಿಸುತಿದೆ.

'ಅಪ್ಪಯ್ಯ ಕೋಪಿಸುತೆ ವನಕೆ ಬಂದನೆ?' ಎಂದು,
'ಅಮ್ಮಗಳಿರಾ ! ಏಕೆ ಕರೆದು ಬರಲಿಲ್ಲೆಂ'ದು,
'ಎಂದು ಹಸ್ತಿನಪುರಕೆ ಹೋಗುವೆವು ನಾವೆಂ'ದು,
'ಅಯ್ಯಯ್ಯೊ ಮರುಳೆ ! ಇನಿತಕೆ ಕಂಬನಿಯೆ?' ಎಂದು,
'ನುಡಿವುದಿಲ್ಲೀ ಮಾತ ; ಕಾಡಿನೊಳೆ ಜೀವಿಸಲಿ !
ಕಾಡುಮಿಗಗಳ ಕೂಟವಾವುದಾದರು ಬರಲಿ !
ನೀವತ್ತು ಮನಕೆ ಕತ್ತಲೆಯ ಕವಿಸಲು ಬೇಡ !'
ಎಂಬ ಮಕ್ಕಳ ತೊದಲೆ ಕದಲಿಪುದು ಅವರೆದೆಯ.

CC-O. In Public Domain. Digitized by eGangotri

ಪಾಂಡುರಾಜನೊ! ಪುರುಷ ಜನ್ಮನಲ್ಲವೆ? ಎಂತೊ
ಇಂದ್ರಿಯವ ಬಿಗಿದು, ಧಾರಿಣಿಗೆ ತನಗಿಹ ಬಂಧ
ಎಂದೋ ಹರಿದುದೆಂದು, ನಲ್ಲೆಯರ ನೋಟದಲಿ
ಬಂದೇ ಬರುವುದೆಂದು ಸುಖದ ಸಂಸ್ಮರಣೆ, ಮುನಿ
ಯೆಂದ ನುಡಿಯೇ ಪ್ರಲಯ ಭೈರವನ ದನಿಯೆಂದು,
ಕೊಂದೇ ಕೊಲುವುದೆಂದು, ಬೆದಬೆದರಿ ಮುದುಮುದುರಿ
ಜೀವವನೆ ಜಗ್ಗಿಸುತ, ಭಾವವನೆ ಕುಗ್ಗಿಸುತ,
ಸವೆಯುತಿರ್ದನು ತನುವ ನಿಸ್ಸಂಗನಾಗಿರುತ.

ಬೇರೆ ಬಗೆ ಮಾದ್ರಿಯದು–ಕಷ್ಟರಾಶಿಯ ಹೊತ್ತು
ಬಾಳಲೆಂದೇ ಪಳಗಿ ಬಂದ ಹೆಣ್ಣಲ್ಲವೇ ?
ಕಾರಿರುಳೊಳಗು ಕಣ್ಣುಬಿಟ್ಟು ನಡೆವರ ದಿಟ್ಟಿ
ಮೇಲೆ ಬರಬರುತ ನಸುಬೆಳಕ ಕಾಣುವ ತೆರದಿ,
ಆಡವಿ ಬಾಳ್ವೆಯ ದುಗುಡದೊಳಗು ನಸುಸಂತಸವ
ಒಡಗೂಡಿಕೊಂಡಿರಲು, ಶಾಂತಿಯನು ಬಯಸುತ್ತ
ರವಿಕಿರಣಹೊಗದಿರುವ ಗುಯ್ಯೆಂಬ ಕಾನನದಿ
ಸುರಿದು ಹೃದಯದ ರಸವ ತಾನೆ ಸವಿಯುವಳಲ್ಲಿ:—

ಸಂತೋಷ ಲಹರಿಯಲಿ ತೇಲಿಬಹ ಯೌವನವೆ !
ಸಂತಾಪವೀಚಿಗಳ ಸೀಳಿಬಹ ಜೀವನವೆ !
ಸ್ವಚ್ಛಂದ ಸಾಹಸವ ಹೇರಿಬರುತಿಹ ನಾವೆ !
ಸ್ವಾತಂತ್ರ್ಯಸಂಭ್ರಮದಿ ಹಾರುತೇರುತ ಬರುವೆ !
ಸಡಗರಿಸಿ ಬಾರಿತ್ತ ! ಸೆಡವಿನಲಿ ಬಾರಿತ್ತ !
ಕಲ್ಲಬಂಡೆಯ ದಡವ ಹೊಡೆದೊಡೆದು ಸೇರಿತ್ತ !
ನಿನ್ನ ಭಾಂಡವ ಮುರಿದು, ಬಗೆ ಬಗೆಯ ಬಣ್ಣಗಳ
ನುಂಣ್ಣಿಸಿದ ಬಣ್ಣಿಸಿದ ಕನಸುಗಳ ಚೆಲ್ಲಿತ್ತ !

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನೊಡವೆಯೆನಲಿದೇ ಕಾಮವಾಸನೆಯೆಂಬ
ಕೂರಸಿಯ ಧಾರೆ ? ಒರೆಯಿಕ್ಕಿ ಕೊಳ್ಳುವೆನಿದನು.
ಪ್ರಾಣಕೋಟಿಗಳ ಜೀವನ ರಸವ ಕುಡಿ ಕುಡಿದು
ಆರದಾಸರಿನಿಂದ ರಣಂಕರಿಸುತಿಹುದಿಂದು.
ಪ್ರಲಯದುಲ್ಕೆಯ ರಭಸದಿಂ ಬಿದ್ದು ಎನ್ನೆದೆಗೆ
ಮಲಗಿರಲಿ ಬಿರಿದ ಮುಗುಳಂತೆ ಬಾಡುತಲಿಲ್ಲೆ.
ಲೋಕವಿಜಯದ, ಜೀವಗೊಲೆಯ, ಘನಪಾತಕದ
ಪಾಪಿ ! ಮಿಾಯಲಿ ಎನ್ನ ಕಣ್ಣೀರ ಗಂಗೆಯೊಳೆ.

ಮೆಯ್ಸಿರಿಯ ಮದದಿಂದ ಮೆಯ್ಯೇರಿ ಮೆರೆ ಸುಗ್ಗಿ !
ಒಪ್ಪುವುದು ನಿನಗಿಂತು ತಿಳಿವ ಮಸುಕಿಪ ಮೋಡ !
ಜೀವಿಗಳ ಬಾಳ್ಕೆಯಲಿ ಯೌವನವೆ ಸುಗ್ಗಿಯಲ ?
ಸುಗ್ಗಿಯೇ ವಿಶ್ವಜೀವನದ ಯೌವನವಲಾ ?
ಒಂದೆ ತೊಟ್ಟಿನ ಒಂದೆ ಗುಟ್ಟಿನೊಂದೇ ಬೆಡಗಿ
ನೊಂದೆ ಕಂಪಿನ ತಂಪಿನೆರಡು ಮೊಗ್ಗೆಗಳಂತೆ,
ಸುಗ್ಗಿಯೇ ! ಯೌವನವೆ ! ಬಾಳಿ ಬದುಕಿರಿ, ಬೆದಕಿ
ಆವ ಬದುಕಿನೊಳಾವ ಸತ್ವವಿದೆಯೋ ಹುಡುಕಿ.

ಕಮ್ಮರರೆ ! ದೇಹಿಗಳ ಕುಟ್ಟಿ ಹುಡಿಮಾಡಿ ಉರಿ
ನಂದದೇ ಧಗಧಗಿಪ ಕುಂಡದಲಿ ಕಿಡಿಯುವಿರೆ ?
ಕೊಂದು ಕರಗಿಸಿ ಮೇಲೆ ತೆಗೆದರೆದು ಬೇಕಾದ
ಚಂದದಲಿ ರೂಪದಲಿ ಬಣ್ಣದಲ್ಲಿ ಸಮೆಯುವಿರೆ ?
ಮುಂದಿಗಳ ಹಿಂದು ಮುಂದಿಗೆ ನೀವು ಕೊಡುವೊಪ್ಪ,
ಸುಂದರಾಕಾರ ಸೌಷ್ಮವಿರಲಿ ! ಏನೆನ್ನ
ಬಂದು ಮೂದಲಿಪಿರೇ ? ಎದೆಯ ಕಾಯಿಪಿರೇನು ?
ಆವ ಕೈಗೆಲಸಕ್ಕೆ ದೊರೆವುದೋ ನೋಡುವಿರೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನೀವತ್ತ ! ನಾನಿತ್ತ !—ನಮ್ಮ ನಡುನಾಡಿನಲಿ
ತಾರೆಗಳು ಬನಿದೆ ಮಿರುಗುವುವು ನಂದುತಲಿಹವು;
ವಿರಹಿಗಳ ಮಿದಿದು ಕೂಗೆಬ್ಬಿಸುವ ನೆನಪುಗಳ
ಹೊಡೆಮಿಂಚು, ಬಿರುಗಾಳಿ, ಜಡಿವ ಭೋರೆಂಬ ಮಳೆ,
ಗುಡುಗುಡಿಪ ಕಾರ್ಮೋಡವೆಲ್ಲ—ಮಾಯಕದಂತೆ
ಒಡನೊಡನೆ ಬಂದು ಕಣ್ಣನು ಮರುಳುಗೊಳಿಸುವುವು;
ಆರಿಗೂ ಕಾಣದಂತಾಗಸದಿ ಕರಗುವುವು;
ಕರಗಿ ಕಣ್ಮರೆಯಾಗಿ ದೂರದಿಂದಣಕಿಪುವು.

ಅರ್ಥವೆನಿತಿದ್ದರೂ, ರಸಭಾವ ತುಳುಕಿದರು,
ವ್ಯರ್ಥವಾಗುವ ತೆರದಿ ಮೇಳಕೊದವದ ಗಾನ—
ಎನ್ನ ಹಾಡಿಂತು ವಿರಸತೆಗೊಂಡು ಕಾಡಿನಾ
ಮೂಕಾನುಭವದಿ ಲಯವಪ್ಪುದೆಂಬುದು ವಿಧಿಯೆ ?
ಕೋಟಿಕೋಟಿಗಳ ಕೊರಲಿನ ಮಧುರ ನಾದದಲಿ
ಹಜ್ಜೆಗಳನಿಟ್ಟು ಬಹುದಾರ ಬಿರುದಿನ ಕೀರ್ತಿ –
ಮದ್ರಾಧಿಪನ ಮಗಳು, ಪಾಂಡುನರಪನ ಗರತಿ,
ಇಂತು ನೆಳಲಿನ ಕೂಡೆ ಸರಸವಾಡುವುದೆ ಗತಿ ?

ಹಸ್ತಿನಾವತಿಯ–ಸಿರಿಯೋಲಗದ, ಮಂಡಪದ,
ಸಿಂಹಾಸನದ, ಚಾಮರದ, ಹಿಡಿದ ಬೆಳ್ಗೊಡೆಯ,
ಅಡಿನೆಳಲೊಳಲ್ಲಿ ಅರಗಿಣಿಗಳಂದದಿ ನಲಿದು,
ಸವತಿ ಸೊಗಗಳ ಹಂಚಿ ತಣಿದು ಸಂತಸಗೊಂಡು,
ಎರೆಯನೊಲ್ಮೆಯ ಹೊನಲ ಎರಡು ದಡದಂತಪ್ಪಿ,
ಆವನೆದೆಯ ಬಟ್ಟೆಯೆರಡಂಚಿನಂದದೊಳೊಪ್ಪಿ,
ಜೀವ ಹಲವಾದರೇನೆಮ್ಮ ಪರಮಾತ್ಮನಲಿ
ಭಾವವೊಂದೇ ಎನಲು ಸೇರಿರ್ದವೈಕ್ಯದಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಡಕಡಲದೊ ! ಮನದ ಉಬ್ಬೆಗದ ಕುದಿಯಿಂದ
ಓಡುತೋಡುತ ಬಂದು, ನೀಳ್ದನಿಯ ನಿಟ್ಟುಸಿರ
ಪಾಡಿನಿಂ ಭರತಖಂಡವನಪ್ಪಿ ಮರುಳುವುದು.
ಪಡುಗಡಲು ಬೆಳ್ನೊರೆಯ ನಲ್ನಗೆಯ ಸಡಗರದಿ
ನಲಿ ನಲಿದು ಮೃದುಲಚುಂಬನವನಿತ್ತೋಡುವುದು.
ಅಂತೆಮ್ಮ ಕೇಳಿಗಳ ನಡುವೆ ಭರತಾತ್ಮಜನ
ಸಂತಸದ ಸರಸ ಸಂಸ್ಕಾರ ಸಮರಸಗೊಂಡು
ಬೆರೆತೊಂದೆ ಬಣ್ಣದಲಿ ನುಣ್ಪಿನಲಿ ಮೆರೆದಿತ್ತು.

ಎಮ್ಮ ಜೀವವೆ ಕೊನರಿ ಕುಡಿಗಳನು ಬಿಟ್ಟಂತೆ,
ಎಮ್ಮ ಸತ್ವವೆ ಕಿರಿಯ ತೊರೆಗಳಲಿ ಹರಿದಂತೆ,
ಎಮ್ಮಾಸೆ ಬೆಂಕಿ ಸೊಡರುಗಳನುರುಹಿದ ತೆರದಿ,
ಎಮ್ಮ ಬಾಳ್ವೆಯ ಬಿಂಬ ಮಾಯೆಗನ್ನಡಿಯೊಳಗೆ
ಭಿನ್ನ ಭಿನ್ನಾಕಾರದಿಂದಲೊಪ್ಪಿದ ತೆರದಿ,
ಒಪ್ಪುತಿಹರಿಂದು ಮಕ್ಕಳು–ನಾಳೆಯರಸುಗಳು !
ಎಮ್ಮಾತ್ಮಶಕ್ತಿಯಿಂತೀಗ ಫಲಿಸುವುದಾಯ್ತು
ಜನ್ಮವೀ ಜವ್ವನದೆ ಬೆಳಗಿ ಪಾವನವಾಯ್ತು.

ಜೀವನದನಂತತೆಯ ಭಾವನೆಯಪಾರತೆಯ
ಸಾರಿ ಘೋಷಿಸಿ ನಲಿವನಂತವಾಹಿನಿ—ತಾನ
ಪಾರವಾಗಿರದೆ ? ಅದರಂತೆ ನಮ್ಮಾಯತಿಯ
ಸವಿವ ಸೊಗ ಸಲುವ ದುಗುಡಗಳೆಲ್ಲ ಕವಿ ಕವಿದು,
ಬೆರೆಬೆರೆಯುತೊಂದಾಗಿ ಮುಂದಾಗಿ ಹರಿಹರಿದು,
ಆವುದೋ ದಿವ್ಯಭಾಷೆಗಳ ಸಂದೇಶವನು
ಕೊಡಲೆಂದು, ಮಡಿಮಡಿದು ಮೇಲೇರುತಿವೆ; ಮತ್ತೆ
ಒಂದೆ ವೇಣಿಯಲಿ ಹಲವೊಂದಾಗಿ ಹರಿಯುತಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಮ್ಮೊಮ್ಮೆ ಸುಖಸೌಖ್ಯವೊಮ್ಮೊಮ್ಮೆ ಕಡುದುಃಖ,
ಒಮ್ಮೊಮ್ಮೆ ನಗೆ, ಸರಸ, ಒಮ್ಮೊಮ್ಮೆ ಅಳು ವಿರಸ —
ನಮ್ಮ ಹೃದಯದ ತಂತ್ರಿಗಳೊಳಾವುದನು ಮಿಡಿಯೊ
ಹೊಮ್ಮುತಿಹುದಾವ ನಾದವೆನುತ್ತ ತಿಳಿದಿಹವ ?
ನಮ್ಮದೊಂದೇ ಹಾಡು—ಸಂತಸದಿ ಕುಣಿಯುವುದು
ದುಗುಡದಲಿ ಕುಗ್ಗಿ ಮುಗ್ಗರಿಸಿ ಬೀಳುವುದೆನಲು
ಬಾರಿಸುವ ಕೈ ಬೇರೆ—ಕೇಳುವಾ ಕಿವಿ ಬೇರೆ !
ಪರತಂತ್ರರೈ ನಾವು—ನುಡಿಯುವೆವು ನುಡಿಸಿದರೆ,

ಬದುಕಬೇಕೈ ಬಾಳಬೇಕು; ಲೋಕವನೆಲ್ಲ
ಜಯಿಸಬೇಕೈ ಆಳಬೇಕೆಂದು ಗಳಹುವುದೆ
ನಮ್ಮ ಅಧಿಕಾರ; ಅಂತೆಸಗುವುದೆ ನಮ್ಮ ಬಲ;
ಅನಿತುದ್ದ ಪೌರುಷವ ಉಕ್ಕೇರಿಸುವುದೆ ಚಲ;
ಅನುಭವತರಂಗಗಳ ಈಜಿ ದಾಟುವುದೆ ಫಲ;
ಹೊಸ ಕಲ್ಪನೆಯೆ ನಮ್ಮ ಜೀವನಕ್ಕಾಡು ಹೊಲ;
ಬಾ ಹೋಗು ನಿಲ್ಲೆಂದು ಇಂದ್ರಿಯವ ಚೋದಿಸುವ
ಆ ದಿವ್ಯ ಶಕ್ತಿಯೊಂದಿರುವುದದೆ ದೈವಬಲ.

ಇದಕಾಗಿ ಕಂಬನಿಯ ಮಿಡಿವೆನೇ ? ಈ ದೈವ
ಮಿದಿಯಲಿಲ್ಲಾರಾರ ? ಸದೆಬಡಿಯಲಿಲ್ಲಾರ ?
ಕಾಲ ಗರ್ಭವ ಸೀಳಿ, ಕಳೆದ ಸೊಬಗನು ಬೆದಕೆ —
ಹಾಳಾದ ಸುಗ್ಗಿಗಳ ಮುಗುಳಾಸೆಯೆನಿತೆನಿತೊ !
ರಾಜ್ಯಗಳ ಹುಡಿಗೆಯ್ದ ರಾಜದಂಡಗಳೆನಿತೊ !
ವಿಶ್ವವೋಹನ ರೂಪ ಚಿತ್ರಶಿಲ್ಪಗಳೆನಿತೊ !
ಎಲ್ಲ ಚಂದಗಳಿದ್ದು ದೇವರೊಲವಿಲ್ಲದೇ
ಕಂದಿಹೋದುವು ಕುಂದಿ ಸುತ್ತುವುವು ನಿಲ್ಲದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸವಿತೊದಲತೊಂಡಿನಲಿ ಕಿವಿಬಂಡ ಸುರಿಸುತಿಹೆ
ನಮ್ಮ ಕನ್ನಡ ಹಕ್ಕಿ ಯಾವ ಕಾಲದ ಕವಿಯೊ !
ಕೊರಲ ದನಿ ಬುಗ್ಗಿಯಲಿ ನಮ್ಮೆದೆಯ ತೊಳೆವ ಪಿಕ
ಆವ ಜನ್ಮದಲಿ ಭಾಷೆಯ ಮರೆತ ಗಮಕಿಯೋ !
ಅರಲೆದೆಯ ಹೀರಿ ತನ್ನೊಳೆ ಮೊರೆವ ಹೆಣ್ದುಂಬಿ
ಆವ ನಲ್ಲನನಗಲಿ ಹಾಡುತಿಹ ವಿರಹಿಣಿಯೋ !
ಶಾಪವೋ ಶಾಪವಿದು—ವಿಧಿಯ ಸಂಕೋಪವಿದು
ಎಲ್ಲ ಗುಣಗಳನಿತ್ತು ಒಂದೊಂದ ಕೊಡದಿಹುದು.

ಮುಳುಗು ಮುಳುಗಿಚ್ಛೆಯಲಿ; ಆದರೊಂದು ತುಂತುರಾ
ದರು ಹನಿಯದಿರಲೊಳಗೆ ! ಕಂಪಿನಿಂ ಕಂಪಿಂಗೆ
ಎರಗೊ; ಪರಿಮಳದ ರಜವೊಂದಾದರೂ ನಿನ್ನ
ಕಿರಿಯ ರೆಕ್ಕೆಯನಂಟದಿರ್ಕೆ ! ಮಿಂಚುಯ್ಕಲೆಗೆ
ಸರಿಯೇರು, ತೂಗು, ತೊನೆ; ಆದರೇನಾ ಬವಣೆ
ತಿರುಗಿಸದಿರಲಿ ನಿನ್ನ ಬುದ್ಧಿ ವಾಸನೆಗಳನು !
ಇದುವೆ ವಿರಹಿಗಳಿಗಿಹ ಸಂದೇಶ ! ಗತಿ ! ನಿಯತಿ !
ಇದುವೆ ಕಟ್ಟಿದೆ ಕಾಡಮರೆಹೊಕ್ಕ ಜೀವಿಗಳ.

ಕಾಲದೊತ್ತಿನಲಿ ಹಿಂದುಳಿಯಲಾಗದು; ಲಗ್ಗೆ
ಯಾಳಪಡೆ ಮುಂದೊತ್ತೆ ಹಿಂಗಬಾರದು; ಮಧುರ
ಗಾನಗಳ ಮೇಳದಲಿ ವಿಷಮ ಶ್ರುತಿಯ ಹಿಡಿದು
ಹಾಳುಮಾಡಲು ಬಾರದದರಿಂದೆ ಸಂತಸದ
ಸಾಲು ಮುನ್ನುಗ್ಗಿ ಬರೆ—ತೆರುವ ಕಪ್ಪವ ಕೊಟ್ಟು
ಹೋದಬಾರದ ಸೊಗವ ನೆನೆದು ಕಂಬನಿಬಿಟ್ಟು
ರೋದಿಸದೆ ವಾದಿಸದೆ ರೂಢಿಯೆಂತಿಹುದಂತೆ
ಸಾಧಿಸುವುದೇ ನಮ್ಮ ಮೇಲ್ಮೆ—ನಮ್ಮಾ ಹೆಮ್ಮೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮರೆತುಹೋಗಲಿ ವಿರಹ ! ಜಾರಿಹೋಗಲಿ ದುಗುಡ !
ಕಂಬನಿಯ ಬುಗ್ಗೆ ಬತ್ತಲಿ ! ಸುಯ್ಯ ರೋದನದ
ಮಿಡುಕ ಮರೆಹೊಗಲಿ ಸುಗ್ಗಿಯ ಚಿಗುರ ಕೆಂಪುಗಳ !
ಉಸಿರು ಹಸರಿಸಲಿ ಕಮ್ಮಲರ ನೀಳಿಸಳಿನಲಿ !
ಯೌವನ ವಸಂತರಾಜರ ಬರವಿನಲಿ ನಲಿದು
ಪುಲಕಗಳ ಗುಡಿಗಟ್ಟಿ, ನಗೆಯ ಮಾಲೆಯ ಕೋದು
ಉತ್ಸವದಿ ಕುಣಿದು ಕಾಲಂದುಗೆಯ ದನಿಯಿಂದೆ
ಮೃತ್ಯುವಾಗಮನವಾರ್ತೆಯ ಮರಸಿ ಮರೆದಿರ್ಪೆ.

ರಾಜಚೂಡಾಮಣಿ ವಸಂತರಾಜನೆ ಬಾರ !
ಅರಲುತಿಹ ಹರೆಯಗಳ ಸೌಖ್ಯಗಳ ನೀ ತೋರ !
ಸುರಿಸು ಭಂಡಾರದಲಿ ಬಯ್ತಿರುವ ಹರಳುಗಳ;
ನಗೆಯ ಸೂಸುವ ರಸವ ಚೆಲ್ಲುತಿಹ ಮುಗುಳುಗಳ;
ಎನ್ನ ಹೆಣ್ತನದ ಮೆಯ್ಸಿಂಗರಕೆ ನಿನ್ನ ನನೆ,
ನಿನ್ನರಲು, ನಿನ್ನ ಕುಡಿ, ನಿನ್ನ ಚಿಗುರೆಳೆಯ ಲತೆ,
ನಿನ್ನ ಸೌಂದರ್ಯ, ನಿನ್ನೀ ರೂಪ, ನಿನ್ನೊಪ್ಪ—
ನಿನ್ನ ಸರ್ವಸ್ವಗಳನರೆಗಳಿಗೆ ಕೊಡಲೊಪ್ಪ.

ನಳನಳಿಸುತಿಹ ನಲ್ಲರೆಲ್ಲರನು ನೀನೊಂದೆ
ನಲ್ಮೆಯಲಿ ಕೋವಂತೆ ಮಲ್ಲಿಗೆಯ ಸುರಿವೆನಿದೊ !
ಮುಗುದೆಯರ ಮುಚ್ಚಿದೆಯ ಬಿಚ್ಚಿ ಅರಳಿಸುವಂತೆ
ನೈದಿಲೆಯ ಮೊಗ್ಗೆಗಳ ಬಿಚ್ಚಿ ಅರಳಿಪೆನಿದಕೊ !
ರಸಿಕನೆದೆಯಿಂ ಕಾವ್ಯರಸವ ಚೆಲ್ಲಿಸುವಂತೆ
ತಾವರೆಯ ಅರಲಬಂಡನು ಹೀರಿ ಸವಿಯುತಿಹೆ;
ವಿಷಯಗಳ ಹಂದರೊಳು ನೀ ತೂಗಿ ನಲಿವಂತೆ
ಬಿರಿದ ಮಾಮರದ ಹಿಂದೋಳದಲಿ ತೊನೆವೆನಿದೊ !

Sri Vidyabharathi Book Centre, Sringeri

CC-O. In Public Domain. Digitized by eGangotri

ಒಡಲು ಸಾವಿನ ಮೇವ ಹೊಲವಾದರೇನಣ್ಣ ?
ತೊಡಿಸುವೆನು ವನದೇವಿ ಕೊಡುವ ಕಾಣಿಕೆಗಳನು.
ಬಂದು ಮೇಯುವ ಮೃತ್ಯು ಆನಂದದಲಿ ಬಂದು
ತಿಂದು ತೇಗಲಿ ! ಧನ್ಯವೆನಿಸಲದರಾಯುಷ್ಯ !
ಕುರುಳಿಂಗೆ ಚಿಗುರು; ಮುಂಗೈಗೆ ಬಳ್ಳಿಯ ಕಡಗ,
ಕಿವಿಗೆ ಸಿರಿಸದ ಕೊಪ್ಪು; ಮೊಗಕೆ ಕುಂದದ ನತ್ತು;
ಕೊರಲಿಂಗೆ ಮೊಗ್ಗೆಸರ; ತೋಳಿಂಗೆ ನನೆಬಂದಿ;
ಸುಗ್ಗಿ ಸಿಂಗರಹೊಂದಿ ಮೆರೆವೆನ್ನೈಕ್ಯದೊಳೊಂದಿ.

ಇಂತು ತನ್ನೊಳು ತಾನೆ ನುಡಿಯುತ್ತ ನಡೆಯುತ್ತ
ತನ್ನಳಲ ತಾನೆ ಸಂತವಿಸುತ್ತ ತವಿಸುತ್ತ,
ಕಳೆದುದನು ಮರವೆಯಲಿ ತೊಡೆಯುತ್ತ ತಡೆಯುತ್ತ,
ದೈವಬಲ ವಾರ್ಧಿಯಲಿ ಮನುಜಬಲ ತೆರೆಯೆಂದು,
ಅದರೊಳಗೆ ಸುಳಿವುದೇ ಕೊರೆವುದೇ ಗರ್ಜಿಪುದೆ
ನಮ್ಮ ಪಾಡೆಂದು, ಬಗೆತಂದು ಧೃತಿಯಾಂತಂದು,
ಕಣ್ಣೀರ ತೊರೆದು ಬಗೆ ಮೋಡಗಳ ನೀಡಾಡಿ
ವಲ್ಲಭನನಗಲಿದರು ಮೆರೆಯುತಿರ್ದಳು ಮಾದ್ರಿ.

*

ಆಲ್ಲಿ ಶತಶೃಂಗಾದ್ರಿತಟದ ಕಾವಣಗಳಲಿ
ಬಳ್ಳಿಮಾಡಗಳಲ್ಲಿ, ತಳಿರ ಸಾಲೆಗಳಲ್ಲಿ,
ಮಾವಿನುಪ್ಪರಿಗೆಯಲಿ, ನಿರಿಗನೋವರಿಯಲ್ಲಿ
ವಿಹರಿಸಿರ್ದಳು ರಾಣಿ: ಮಾಡಲಿಹುದೇನುಂಟು ?
ಕೂಡಲಾವುದು ನಂಟು ? ತಿಳಿಯದೇ ತಿರುತಿರುಗಿ,
ಆಡುವುದೆ ಹಾಡುವುದೆ ನಗುವುದೇ ನಲಿವುದೇ
ಜೀವನದ ಕರ್ಮ; ಜೀವದ ಧರ್ಮ; ವಿರಹಕಿದೆ
ಲೇಸಾದ ಮದ್ದೆಂದು ತೋರಿಸುವ ತೆರದಿಂದೆ.

CC-O. In Public Domain. Digitized by eGangotri

ಸಾಮಾನ್ಯ ಗಿರಿಯಲ್ಲ—ಅದರ ತಪ್ಪಲೊಳಿತ್ತ
ಸಾಮಗಾನದ ಬಿಂದು ಹನಿಯಾಗಿ ಸುರಿಯುತಿದೆ;
ವೇದ ವೇದಾಂತಗಳ ತತ್ವ ನಿರ್ಝರ ಘೋಷ
ಶಾಂತಿ ಶರಧಿಯ ಮೇಲೆ ವಲಿಯನೆಬ್ಬಿಸುತಲಿದೆ.
ತಿಳಿವುಗಣ್ಣಿಗೆ ಗೋಚರಿಸದೆ ಮಸು ಮಸುಕಾಗಿ
ಕಲ್ಪನೆಗೆ ನಸುಕಾಂಬ ಯುಗದ ಸೀಮೆಯ ಹಿಂದೆ —
ಜೀವದಲಿ ತಿಳಿವನೂದಿದ ಅನಂತ ಪ್ರಾಣ
ವಾಯುವೆಲ್ಲಿಯೊ ಬೀಸುವಂದದನುಭವವಹುದು.

ಹಲವು ದೇಹಿಗಳಲ್ಲಿ ದೇಹದೊಳಗೇ ಸುಳಿದು
ಹೊಡೆದು ರೆಕ್ಕೆಗಳ ಗರಿನೋಯೆ, ಕಣ್ಣೀರ್ಸುರಿದು
ಅಳುತಿಹವು; ಕೆಲವು ಗಾಳಿಯನೇರಿ ಮೇಲೆದ್ದು
ಒಡಲ ಮೋಹವು ಸೆಳೆಯಲಲ್ಲೆ ಬೀಳುತಲಿಹವು;
ಕೆಲಕೆಲವು—ಬಾನತ್ತ ಸರಿದು ನೆಲೆ ಕಾಣದೇ
ಹಿಂದು ಮುಂದರಿಯದೇ ಗೂಡೆ ಲೇಸೆನುತಿಹವು—
ತೆರೆಯ ಹರಿದೀಡಾಡಿ ತನುವ ಒಂದೆಡೆ ಸೇರ-
ಲೆಳಸುತಿಹ ವೇದನೆಯೆ ಎಲ್ಲೆಲ್ಲಿ ಸುಳಿದಿಹುದು.

ಇಂತು ಸಾಧನೆ ನಡೆಯೆ, ತನ್ನ ಮಕ್ಕಳ ಕೂಡೆ
ಕಣ್ಣ ಮುಚ್ಚಾಡುವನು ಪಡೆದ ಮೋಹದ ತಂದೆ !
ಮುಗಿಲ ಮುಂಡಾಡುತಿಹ ಮರದುದಿಯನೇರ್ದಂತೆ —
ಕೆರೆಯ ತಿಳಿನೀರಲ್ಲಿ ತೇಲ್ದಂತೆ, ಬಚ್ಚಲಲಿ
ಹರಿದೋಡಿ ಮರೆಯಾದ ತೆರದಿಂದೆ, ಋತುಗಳಲಿ
ತಲೆಮರಸಿ ವಿಧವಿಧದ ವೇಷಗಳನಾಂತಂತೆ
ಬಿನದಿಪನು; ಕಾಣುವರ್ಥದ ಮರೆಯ ಮಿಂಚಿನೊಲು
ಮಿರುಗುವರ್ಥಧ್ವನಿಯ ರೀತಿಯಲಿ ಸೇರಿಹನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲೊಂದು ಸಮತೆಯಿದೆ; ತತ್ವದಾಕಾಶದಲಿ
ತೆಳ್ಳನೇ ತೇಲುವಾ ಹಕ್ಕಿಗೂ ಗೂಡಿಹುದು;
ಸಂಸಾರ ಬಂಧನದಿ ಸಿಲುಕಿ ಸಿಡಿಮಿಡಿಗೊಂಡ
ಪಂಚವರ್ಣದ ಹುಲಿಗು ಗವಿಯೊಳಗೆ ಬೀಡಿಹುದು;
ಬೇಡನಾ ಬಾಣದಿಂ ಬದುಕಿ ಬಂದಾವಿರಹಿ
ಹರಿಣಕಲ್ಲಿಯೆ ಪಕ್ಕೆಯಿದೆ; ಎಲ್ಲಕೊಂದೆನೆಲೆ;
ಕೊಂದು ಕೂಗುವ ನೀತಿ—ಕಠಿಣ ಶಾಸನ ಭೀತಿ
ಒಂದಿಲ್ಲವಿಲ್ಲಿ—ಕಾನನದ ಸಾಮ್ರಾಜ್ಯದಲಿ.

ತನ್ನೆದೆಯ ಪಡಿದೆರೆದು ಹಣಕಿ ನೋಡುವರಿಲ್ಲ;
ತನ್ನ ಮಾತಿಗೆ ಟೀಕೆ ಬರೆವ ಪಂಡಿತರಿಲ್ಲ;
ತನ್ನೆದೆಯ ಕಿಚ್ಚಿಗಿಂಧನವನೊಟ್ಟುವರಿಲ್ಲ;
ತನ್ನ ನೆಳಲಲ್ಲದಿನ್ನಾರು ಕರುಬುವರಿಲ್ಲ;
ಪರ್ಣಶಾಲೆಯ ಸೊಗದೊಳಿಂತು ಮೆರೆದಳು ಮಾದ್ರಿ
ಪಾಂಡುರಾಜನ ಕಿರಿಯ ರಾಣಿ, ಮೋಹದ ರಾಣಿ,
ಸುಖದ ದುಃಖದ ಏಪುಲವೇಣಿ, ಪನ್ನಗವೇಣಿ,
ಭಾಗ್ಯದೇವತೆಯ ಕೊರಲಿಂ ಬಿದ್ದ ಕಟ್ಟಾಣಿ.

೪

ಎಣಿಕೆಯೊಳಗೆ ಸಿಲುಕಲಿಲ್ಲ;
ಭಾವನೆಯಲಿ ಹೊಳಕಲಿಲ್ಲ;
ಹಳೆಯ ದೈವವದುವೆ ಬಂದು ಮಾದ್ರಿಯೆದೆಯ ಟೊಣೆಯಿತು.
ಕನಸು—ನೆನಸು ಎಂಬುದಿದುವೆ
ಬಟ್ಟೆಯೊಳಗೆ ಹಾಸು ಹೊರಸು !
ಎರಡರೊಳಗು ಹೊರಗುನುಲಿವ ಕೈಯ ಕುಣಿತ ಕಾಣದು.

CC-O. In Public Domain. Digitized by eGangotri

ಪ್ರೇಮರಸದಿ ತುಂಬಿ ತುಂಬಿ
ತುಳುಕುತಿರುವ ಹೃದಯ ಪಾತ್ರ,
ಬೇರೆ ಭಾವನೆಗಳನೆಂತು ತುಂಬಲೆಡೆಯ ಕೊಡುವುದು ?
ಒಬ್ಬ ರಾಜನೊಂದೆ ಭಕ್ತಿ,
ಮಾದ್ರಿಯೆದೆಯ ಹಿಡಿಯೆ, ಶಕ್ತಿ
ಯಿದ್ದುದೆಲ್ಲವವನ ನೆನಹಿಗಾಗಿ ಸವೆದುಹೋದುದು.

ಸುಗ್ಗಿಯರಲು ಕಣಿದು ಬನದಿ
ಚಿಗುರುದುಟಿಯು ನಕ್ಕ ದಿನದಿ
ವಿಶ್ವವೇ ವಸಂತನಡಿಯ ಹಾಸಿನಂತೆ ಹರಡಿತು.
ಮರವೆ ಮುಸುಕಿ ದಂಪತಿಗಳು
ಕೂಡೆ—ಜೊಂಪದೊಂದು ಮುಗುಳು
ತೊಟ್ಟು ಕಡಿದು ಜಾರುವಂತೆ ಗಂಡು ಬಾಳುಕೆಡೆದುದು

ಹಕ್ಕಿ—ಹಾರು ಹಾರುತಲ್ಲಿ
ಗಾಳಿ ತಳಿರು ರಮಿಸುವಲ್ಲಿ
ಇನಿಯಹಣ್ಣು ಕುಟುಕುಗೊಂಡು ಬಾನಮರೆಯ ಸೇರಿತು.
ನವಿರ ಸೋಂಕಿ ಹಾರ್ವ ಮೊದಲೆ —
ಸವಿಯ ತುಟಿಯ ಹೀರ್ವ ಮೊದಲೆ —
ಹಾವಿನಂತೆ ಒನಲಿ ಕನಲಿ ಶಾಪವುಸಿರ ಹೀರಿತು.

ನೆನಪು ಬಂತು—ಮುನಿಯ ಶಾಪ !
ಸುಡಲು ಬಂತು ಹೃದಯ ತಾಪ !
ಗುಳುಗುಳಿಸುತ ಗರ್ಜಿಸುತ್ತ ಮರವೆಯಲೆಗಳೇಳುತ
ಹೊಡೆದು ಕೆಡೆದುವವಳ ಕೆಳಗೆ;
ತೇಲಿಸಿದುವು ಇಹಕೆ ಪರಕೆ !
ತಿಳಿವಿನೊಡನೆ ಬಂದುದವಳ ನೆನಪು— ಅಳಲ ಮಸೆಯುತ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂತು ನಿಂತು ಜಾನಿಸುತ್ತ,
ನಿಲ್ಲದಲೆದು ಸುಳಿಯುತತ್ತ,
ಮಲ್ಲಳಿಗಳ ಮಸಣಹಾಡ ಮೇಳಗೊಂಡು ನಡೆಯುತ;
ಮಾಯೆ ಕಟ್ಟಿ ಕುಣಿಸುತಿರುವ
ಮಣ್ಣಬೊಂಬೆ—ಅರಸಿ ಮಾದ್ರಿ
ಅರಸನೆಡೆಯ ಪಡೆಯಲೆಂದು ಹಿಂದೆ ಮುಂದೆ ನಡೆದಳು.

ತನ್ನ ಭಾಗ್ಯ—ಭೋಗ್ಯವೆಲ್ಲ,
ತನ್ನ ನಿಯತಿ ಸುಗತಿಯೆಲ್ಲ.
ಬಿನ್ನನಲ್ಲಿ ಮರವೆಯೊಳಗೆ ಮೌನದೊಳಗೆ ಕೆಡೆದಿರೆ.
ಆಳುವಳೀನು ಸುಯ್ವಳೀನು ?
ಬರಿದೆ ವಿಧಿಯ ಬೈವಳೀನು,
ಎಲ್ಲ ಮಾತ ಮರೆತನಂತ ಶಾಂತತೆಯನು ಬಯಸದೆ ?

ಗಾಳಿ ಬಂದು ಹೊಡೆದ ಬಳಿಕ
ಸೊಡರ ಮೊಗದೊಳಾವುದೆಸಕ ?
ಹೊಗೆಯ ಸೂಸಿ ಮೊಗವ ಮಾಸಿ ಮೌನವಡೆವುದಲ್ಲದೆ ?
ಮೌನಕಾವ ಬುದ್ಧಿ ? ತನ್ನ
ನಲ್ಮೆ ನಾಡ ಪಡೆವ ಸಿದ್ಧಿ
ಪ್ರೇಮಕಿರುವ ಯೋಗ ಭೋಗ ದಾರಿ ತೋರ್ವುವಲ್ಲಿಗೆ.

ಬೇಸಿಗೆಯಲಿ ಬಿಸಿಲು ಮುನಿಸು
ಬೆಂಕಿಯಿಂದ ಸುಟ್ಟರೇನು ?
ಮುಗುಳ ಮುದ್ದು–ಅರಲಬಿರ್ದು ಬಳ್ಳಿಗೇನು ಮರೆವುದೆ?
ಗಂಡ ನಡೆದ—ತನ್ನ ಸೈಪ
ಕೊಂಡೆ ನಡೆವ—ಸಾವಕೊಂಡು
ದಿಂಡುಗೆಡೆದನಾದರವಳ ವಿಾಸಲೇನು ಕೆಡುವುದೆ ?

CC-O. In Public Domain. Digitized by eGangotri

ಬಿಗಿದ ಹುಬ್ಬು, ಬಿಟ್ಟ ಕಣ್ಣು,
ತುಟಿಯ ಮಾಸುನಗೆಯು ಚೆನ್ನು,
ಬೊಮ್ಮ, ಬರೆದ ರೂಪ ಮೃತ್ಯು ತಿದ್ದಿ ಬರೆದನಾಗಳೆ
ಅವಳ ತೋಳ ಸೊಂಕಿನಿಂದ
ಅರಸಗಿಂತು ಬಂತು ಚಂದ !
ಆಹ! ಹೆಣ್ಣ ತೋಳು ಯಮನ ಕಯ್ಯ ಕುಂಚವಾದುದೆ ?

ಇನಿಯ ತುಟಿಯ ತೋಟಿಯಂತು
ಜೀವನವನೆ ಹೀರಿ ಬಂತು !
ಅಯ್ಯೊ ಕದಪಿನೊಂದು ಗಾಯ ಚಾಡಿಯೊರೆವುದೀಗಳು.
ತೋಳಬಂದಿಯೊಳಗೆ ನಲ್ಮೆ
ಯಾಳ ಹಿಡಿದು ಕೊಂದ ಬಲ್ಮೆ,
ಗಾವ ಶಿಕ್ಷೆಯೆನ್ನುತವಳ ಮೊಗದ ಮೌನ ಕೇಳ್ವುದು.

ಶಾಂತಿ ರಸದಿ ಮುಳುಗಿ ಮುಳುಗಿ,
ಆವ ದಡಕೊ ತೇಲಿ ತೇಲಿ,
ಅವನ ದಿಟ್ಟಿಯವಳ ಮನವ ಹೇರಿ ಹಾರಿ ನಡೆದುದು
ಮೌನದೊಳಗೆ ಮುಳುಗಿ ಹುಡುಕೆ
ಕಳಚಿ ಬಿದ್ದ ಜೀವರತ್ನ
ನಿನ್ನ ಕೈಗೆ ಸಿಲುಕದೆಂದು ತುಟಿಯ ಮಿಡುಕವೊರೆದುದು.

ಹುಬ್ಬಿನೊಳಗೆ ಗಂಟು ಕಟ್ಟಿ
ಆವುದಳಲ ಕೊಂಡು ನಡೆದ ?
ಎಣಿಸಲಾರೆ ತಿಳಿಯಲಾರೆನೆಂದು ನೊಂದು ಕುದಿವಳು.
ಮಾತು ಬತ್ತಿಹೋದ ಬಳಿಕ
ಎದ್ದು ಬಂದ ಮೆಯ್ಯ ಪುಲಕ
ಆವ ನುಡಿಯನಡಗಿಸಿಹುದೊ ! ಎಂದು ನಿಂದು ನೋಳ್ಪಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರೆದೆಯೆಂದು ಬಂದೆನಲ್ಲ;
ಬರಲು—ನಡೆದೆ ! ನುಡಿಯಲಿಲ್ಲ !
ಎನ್ನ ತುಟಿಯನೇರಿ ಮೃತ್ಯು ನಿನ್ನ ಮೊಗಕೆ ಹಾರಿತೆ ?
ಪ್ರೇಮಕುಂಟೆ ಶಾಪವೆಂದು
ಮುನಿಯ ಮುನಿಸ ಮರೆತು ಬಂದು
ಮುಟ್ಟಿ ನಿನ್ನ ಪ್ರೇಮದೊಳಗು ಜವನ ಬಾರಿಯಿರ್ದುದೆ?

ಪಾಪವೆಂದು, ಶಾಪವೆಂದು,
ಕೆಟ್ಟ ವಿಧಿಯ ಕೋಪವೆಂದು,
ಹಳಿವುದೇಕೆ ? ಜರೆವುದೇಕೆ ? ಪ್ರಣಯದಗ್ನಿ ಸುಟ್ಟಿತು.
ನಿನ್ನ ಹಗಲಹೊತ್ತು ಹೋಯ್ತು.
ಇರುಳ ಬಾಳ್ಕೆಯೆನಿತು ಹೊತ್ತು ?
ಇರುಳು ಹಗಲು ಸಾವು ಹುಟ್ಟು ಕೂಡುವೆಡೆಗೆ ನಡೆವೆವು

ನಂಟನಂತೆ ಬಂದನಾತ—
ಅವನ ಬಳಿಯೆ ನಡೆದ ನಾಥ
ಗರತಿಯಾಗಿ ಸೇವೆಗೆಯ್ಕೆ ಹೋಗದಿರುವುದೊಳ್ಳಿತೆ ?
ಇಳೆಯ ಬುತ್ತಿ ಬೇಡ ನಮಗೆ—
ಅಳಲ ತುತ್ತು ಸಾಕು—ಬಿಡುವೆ !
ಹೆಣ್ಣನಡೆಗೆ ಹಂದರೆಂಬ ಮಸಣವೆಂಬ ಗೆಡಿಗಳೆ ?

ಹಚ್ಚಹಸುರ ಹಂದರಲ್ಲಿ
ಸಿಗೆಯ ನುಡಿಯ ಸಡಗರದಲಿ—
ಇಳೆಯ ಹರಕೆ ಹಾಡುಗಳಲಿ ನಮ್ಮ ಕೂಟವೊಪ್ಪಿತು.
ಮೇಲುನಾಡ ಮಾಡದಲ್ಲಿ
ತಾರಗೆಗಳ ತುಪ್ಪಳಲ್ಲಿ
ಹಸೆಯ ಹಾಸಿ ಕೂಡೆ ಸಾವು–ನೋಡುತೆಂತು ಸಹಿಪುದು?

CC-O. In Public Domain. Digitized by eGangotri

ತಾರಗೆಗಳೆ ! ಕಟ್ಟಿ ತೂಗಿ
ಬಾಲರವಿಯ ತೂಗು ಸೊಡರ !
ಬಾನಮಂಡಪದಲಿ ಮದುವೆ ! ಹಾಡುವವರೆ ಹಾಡಿರಿ !
ಮದುವೆಗಾವ ಸಿಂಗರಗಳು ?
ಕಣ್ಣ ನೀರೆ ? ಬಿಡುವ ಸುಯ್ಲೆ ?
ಹಳಬರಿಟ್ಟ ತೊಡವು ಬೇಡ ನಮಗೆ, ಹೊಸತನೀವುದು.

ಜವ್ವನವೇ ! ಬಿಡುವುದೆನ್ನ ;
ಸಿಂಗರವೇ ! ಸುಡುವುದೆನ್ನ ;
ಇಂದ್ರಿಯವೇ ! ಕೆಡಹು ನನ್ನ ಅರಸಕೆಡೆದ ಚಿತೆಯಲಿ.
ಜೀವ ಕುಳಿತ ಮಣೆಯ ಮಣ್ಣ
ದೇಹವಿದನು ಕೊಂಡು ನಿನ್ನ
ಮಡಿಲೊಳಿಟ್ಟು ಮುಚ್ಚು ಮಾತೃಭೂಮಿ! ಕಾಣದಂದದಿ.

ಎನ್ನ ದುಗುಡದಿಂದೆ ಬೆಂದು
ಸಂತಸದಲಿ ನೆನೆದು ನಲಿದು
ಎದೆಯ ಹಾಡ ಕೇಳಿ ಕುಣಿದ ಕೆಳೆಯ ಬಳ್ಳಿಮರಗಳೇ !
ಬೆದರಬೇಡಿ ! ಬೆಚ್ಚಬೇಡಿ !
ಹಿರಿಯ ಜನ್ಮಕಿದುವೆ ಕರ್ಮ !
ಎಮ್ಮ ಧರ್ಮಕುಂಟೆ ಅರ್ಥ? ನಿಮಗೆ ತಿಳಿಯಲಿರುವುದೇ?

ಗಂಡು ಹೆಣ್ಣು—ಎಂಬ ಭೇದ—
ದೇವರೊಂದೆ ಮೆಯ್ಯ ಭೇದ
ಒಂದನಗಲಲೊಂದು ವಿಶ್ವರೂಪವರ್ಧವೆನಿಸದೆ ?
ಜನನವೆಂಬುದಿದುವೆ ತೊಟ್ಟು ;
ಹೆಣ್ಣು ಗಂಡು—ಜವಳಿ ಹುಟ್ಟು ;
ಮೊಗ್ಗೆಯಾಗಿ ಕೂಡಿಬಿದ್ದು ಮುಗ್ಗಿ ಹೋಪುವೊಮ್ಮೆಗೆ

*

Sri Vidyabharathi Book Centre, Sringeri

CC-O. In Public Domain. Digitized by eGangotri

ಓದಿ ಬಾರದಿರುವ ಬೋಧ
ಒರಲಿ ಬಾರದಿರುವ ವೇದ—
ಕಾದಲೆಯರ ನಲ್ಮೆಯಿದಕೆ ಸಾಟಿ ಕಂಡರಿರುವರೇ ?
ತೆರೆಗಳಿರಲಿ ! ಸುಳಿಗಳಿರಲಿ !
ಅರಸನೊಲ್ಮೆ ಕಡಲಿನಲ್ಲಿ
ಮುಳುಗಿ ಮಿಾವ ಸಾವ ಹೆಣ್ಣ ನೋಂಪಿ ಜಸವ ಬೆಳಗಲಿ!

ಹುಲ್ಗಳಿಲ್ಲ ನಿಮಿರಿನಿಂತು
ಹುಲ್ಲೆ ಹಿಂಡು ಮಿಡುಕವಾಂತು
ಹೊದರ ಚಿಗುರುನೊಂದು ನೋಂತು ಬೀಳುಕೊಂಡುವಾಕೆಯ.
ಕಾಡಿನೆದೆಯ ಗವಿಗಳೊಳಗೆ,
ಬಳ್ಳಿಮನೆಯ ನೆಳಲಿನೊಳಗೆ,
ರೂಪ ಬರೆದು ಕೊಂಡುದೇನು ಬನದ ಕತ್ತಲಾಕೆಯ ?

ಎಂದಿನಂತೆ ತರಣಿ ಹುಡುಕಿ
ನಂದುತಿಹೆಯ ? ಗಂಧವಹನೆ
ಎಂದಿನಂತೆ ಮೊಗ್ಗೆ ಹೂವನರಸಿ ನೋಡುತಿರುವೆಯ ?
ಬಾನ ಕಿವಿಯೆ ! ಬಿಟ್ಟು ಕೇಳ್ವೆ
ಕೇಳಲಾರದವಳ ಸುದ್ದಿ !
ಯುಗವು ಮುಂದೆ ನಡೆಯೆ, ಹಿಂದೆ ನೆಗೆದಳಾಕೆ ನೆಟ್ಟನೆ.

ದಂಡ ಹಿಡಿದು ಕೊಲುವ ಕೈಗೆ,
ಇಳೆಯ ಹಳಿವ ಜೋಗಿ ಬಾಯ್ಗೆ,
ದಿಂಡುಗೆಡೆದು ದೇವನಡಿಗೆ—ದುಡಿವ ಧರ್ಮಕರ್ಮಿಗೆ
ಸಾವ ಸುದ್ದಿ ಕೇಳಲೊಡನೆ
ತಣ್ಣಸೇರಿ ಬಸವು ಕೆಡದೆ ?
ಜವನ ಕೈಯ ಪಾಶಕಿಂತು ಕೊರಲ ಕೊಡುವರಿರುವರೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲ ಜನಕು ನೀತಿಯೊಂದೆ;
ಎಲ್ಲ ನೆಲಕು ರೀತಿಯೊಂದೆ;
ಎಲ್ಲರೆದೆಗು ಭೀತಿಯೊಂದೆ ! ಅದನು ತೊಡೆಯಲಾರರು.

ಹೋಗುವವರ ಕಂಡು ಮರೆತು
ಜೀವನಗಳ ಕೊಂಡು ಬೆರೆತು
ಕಾಲ ಬರುವ ವೇಳೆ ಬೆದರಿ ಸಾವ ಮೊದಲೆ ಸಾವರು.

ನಲ್ಲನೆಂದು ನಲ್ಲೆಯೆಂದು
ಬಲ್ಲಬೆಡಗು ನುಡಿಯನೊರೆದು
ಇಳೆಯ ಕಾಳುಗೆಡೆವ ಜನರ ಬೀಳುನುಡಿಗೆ ಸಲುವರು.

ಜೋಡುಗೊಂಡ ಮನದ ನಡುವೆ
ಮೂಡಿ ಬರಲು ಜವನ ಬಾರಿ
ಬಲೆಯ ಕಂಡ ಹಕ್ಕಿಯಂತೆ ಕೆಳೆಯ ಕಳೆದು ಹಾರ್ವರು.

ಎಲ್ಲಿ ಕಾಂಬುದಿನಿತು ನಲ್ಮೆ ?
ಎಲ್ಲಿಯೆದೆಯ ಕೂರ್ಮೆ ಬಲ್ಮೆ ?
ಮಾದ್ರಿ ಮಡಿದಳೇನು ? ಅವಳ ಹಿಡಿದ ಮೃತ್ಯು ಮಡಿದುದು

ಮಡಿಯಲಾರದವಳ ಮೂರ್ತಿ !
ಮಾಸಲಾರದವಳ ಕೀರ್ತಿ !
ಜವನ ಕೈಯ ಸೊಡರ ಬೆಳಗಲವಳ ಚಿತೆಯ ಕೆಂಡವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುರಲೀನಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮು ರ ಲೀ ನಾ ದ

೧

ಎಲ್ಲಿಗೆ ಪಯಣವೊ ದಾರಿಗ ನಿನಗೆ ?
ಚೆಲ್ಲಿರೆ ಕತ್ತಲೆ ಹಗಲಿನ ಮೊಗಕೆ,
ಸಾವಿನ ಬೀಜವ ಬಿತ್ತಲು ಸಂಜೆ
ಜೀವವ ಕರೆವುದು; ನೀನಿನಿತಂಜೆ !

ತಾವರೆಯೆದೆಯಲಿ ಮಲಗುತ ತಂಬಿ
ಜೀವನ ಭಯದಲಿ ಅವಿತಿರೆ, ನಂಬಿ
ತಾರೆಯ ಬೆಳಕನು, ದಾರಿಯ ನಡೆವ
ಧೀರತೆಯೇನೈ ? ಬಿಡುಬಿಡು ಚಲವ.

ಕತ್ತಲೆಯೆಂಬೀ ಮದಿರೆಯ ಕುಡಿದು
ಎತ್ತೆತ್ತಲು ಘೂರ್ಣಿಸುತಿದೆ ಕಾಡು,
ಕಣ್ಣೀರ್ಸುರಿಸುವ ಎಳಪೈಯ ಕಂಡು
ಬೆನ್ನೊಳೆ ಬರುವವನಾವನೊ ಗಂಡು ?

ಎಳೆಯನು ನೀನೆಂದಿದೊ ಸಾರುವುದು
ಚೆಲುವಿನ ಕೇತನ–ನಿನ್ನೀ ಕದಪು;
ಹರಹಿದ ಹುಬ್ಬಿನ ಬಲೆಯಲಿ ಸಿಲುಕಿ
ಗರಿಹೊಡೆವುದಿದೋ ಆಸೆಯ ಹಕ್ಕಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಳೆಯನೆಬ್ಬಿಪ ಕೋಳಿಯ ಕೂಗು
ಕೇಳಲು ದಾರಿಯ ಹಿಡಿ ನೀ ಹೋಗು.
ಜೀವನವೆಂದರೆ ಆಟದ ಬಯಲೆ ?
ನೋವಿನ ಗುರಿಯೊಳೆ ಜೀವಕೆ ನೆಲೆಯೆ?

ಬಳಿಯೊಳೆ ಎಲೆಮನೆಯೊಂದಿಹುದಿಲ್ಲಿ
ಕಳೆವೆನು ವರ್ಷವ ದಿನದಂದದಲಿ;
ಹಗಲೆನ್ನುತ ಕುಣಿದಾಡದು ಬಯಕೆ
ಹೊಗೆ ಹಿಡಿಯದು ಕತ್ತಲೆಯದು ಮುಸುಕೆ.

ಏತಕೆ ನಿನ್ನಯ ನುಣ್ಣುಟಿಗಳನು
ಭೀತಿಯ ಮೌನವು ಕಾಯುವ ಹದನು?
ಎನ್ನೀಕಾವಿಯ ಎನ್ನೀಜಡೆಯ
ನನ್ನಿಯೆನುತ ನಂಬುತೆ ನುಡಿಗೊಡೆಯ?

ಅಹುದೆಲೆ ದಾರಿಗ ! ದಾರಿಯ ಕೆಲದಿ
ಕುಹಕತೆ ನಗುವುದು ನನ್ನಿಯ ತೆರದಿ;
ಬೆದರಿಕೆ ಸಹಜವು ದೂರದ ಜನಕೆ
ಬದುಕಿನ ನೆಲೆಯನು ಕಾಣದ ಮನಕೆ.

ಆರೆದೆ ಬಾಳಿನ ಮೊನೆಗಾಯದಲಿ
ಗಾರಪ್ಪುದು ಕೆಡೆವುದು ನೆತ್ತರಲಿ,
ಮುಗುಳಿನ ಮೊನೆಯಾದರು ಬೆದರುವುದು;
ಮಗಮಗಿಸುವ ಕಂಪಿಗೆ ಕೋಡುವುದು.

ಆದರದೇನ್ಯ ? ಕಾಂಬುದಿದೆಲ್ಲಾ
ಮೇದಿನಿಗಿಹ ಕವಡಿನ ಮುಸುಕಲ್ಲ.
ಮುದುರುವ ಮಾಗಿಯ ಮೆಯ್ಯೊಳಗೊಳಗೆ
ಉಬ್ಬಿಸುವ ಸಾಗ್ಗಿಯ ಬೀರಲೆ ಹೊರಗೆ ?

CC-O. In Public Domain. Digitized by eGangotri

ಹೆಸರನು ಕೇಳುವೆ; ಹೆಸರೆನಗುಂಟೆ ?
ದೆಸೆಯಿಲ್ಲದೆ ಮುನಿಗಿಲ್ಲದ ನಂಟೆ ?
ಆವುದೊ ನಾಡಿಂದೂದಿದ ಗಾಳಿ
ಜೀವದ ಕಿಡಿಯನು ಉರಿಸಿದುದಿಲ್ಲಿ.

ಇನಿಯರು ನಿನಗಾರೆಂದೇಕೊರೆವೆ ?
ಮೊನೆಮಾತಿಂದಲಿ ಬಗೆಯನು ಕೊರೆವೆ
ಗೆಳೆತನವಿಲ್ಲದೆ ಜೀವನವಿರದೆ ?
ಸುಳಿಯಲು ಗೆಳೆತನವೊಂದೇ ಹೊಲವೆ?

ನೇಹವೊ ? ಅದು ಬೆಳಗಿನ ಹನಿ ಮಂಜು;
ಮೋಹವೊ? ಜೀವವ ಹೀರುವ ನಂಜು;
ಆವುದನೊಲ್ಲದೆ ಕಾಡನು ಹೊಕ್ಕೆ
ಭಾವನೆಗಿಲ್ಲಿಯೆ ಮಲಗುವ ಹಕ್ಕೆ.

ಲೋಕವ ನಚ್ಚದ ಮುನಿಯಿವನೆಂದು
ಮಾಕರಿಸದಿರೆಲೆ ದಾರಿಗ ನೊಂದು.
ಮನುಜನ ಮಾಟದ ಹಬ್ಬವ ಮೆಚ್ಚಿ
ಮನದಾ ಮೌನದ ನೋಂಪಿಯೊಳಿಚ್ಚೆ.

ಸುಗ್ಗಿಯ ಚಿಗುರಿನ ರಾಗವ ಕಂಡು
ಹಿಗ್ಗುವನೀ ಮುನಿ ಸಂತಸಗೊಂಡು;
ಮುಗ್ಗುವ ಮುಗುಳಿನ ಮೋಹದ ಚಿಂತೆ
ಕುಗ್ಗಿಪುದಿವನನು ಲೌಕಿಕನಂತೆ.

ಎಳ ಹುಲ್ಲೆಯ ಚಕಿತಾಲೋಕನವು
ಕಲಿಪುದು ನಲ್ಮೆಯ; ಯೌವನದಿರವು
ಗಳಿಯಿಸುವಂತಿರೆ ಬಳುಕುವ ಲತೆಯ
ತಳಿರುಡಿಯಲು ಸುರಿವನು ಕಂಬನಿಯ.

CC-O. In Public Domain. Digitized by eGangotri

ಗಿರಿತಟದಲಿ ತರುಮೂಲದೆ ಬಂದು
ಹರಿಯುವ ಕಾಳ್ಪರದಲಿ ತಾ ಮಿಂದು
ಮರೆವನು ಧರಣಿಯ ಜೀವನದಿರವ,
ಸೆರೆಗೊಂಬನು ನಿಮಿಷದಿ ಚಿತ್ಸುಖವ.

ಬಾರೆಲೆ ! ಎಲೆಮನೆ ಕರೆವುದು ನಿನ್ನ;
ಕಾರಿರುಳನು ಕಳೆ, ತೊರೆ ನೀನೆನ್ನ;
ನಚ್ಚಲುಬೇಕ್ಕೈ ಮೆಚ್ಚಲುಬೇಕು
ಇಚ್ಚೆಗೆ ನೆಲೆಯೊಂದಾದರು ಬೇಕು.

ಅನ್ನಿಗನಿವನೆಂಬಂಜಿಕೆಯೇಕೆ ?
ತನ್ನವನೆಂದೇ ಮೂಡಲಿ ಎಣಿಕೆ.
ಎನ್ನಯ ನಿನ್ನಯ ಎರಕವ ಕಂಡು
ಚುನ್ನವನಾಡಲು ಆರಿಗೆ ಹುರುಡು ?

ಮೆಲ್ಲೆದೆ ರಾಗವ ಹರಿಯಿಸಿ ನಿಂದು
ಲಲ್ಲೈಸುವನೀ ಧರಣಿಯನಿಂದು;
ತಂಗದಿರಿನ ಪೂರದಿ ಮಂಳುಗೆದ್ದು
ಕಂಗೆಟ್ಟಿವೆ ತಾರೆಗಳವು ತೊಯ್ದು.

ಆಡದು ಗಿಳಿ, ಮಾತಾಡದು ಮಧುಪ,
ಹಾಡದು ಪಿಕ, ಕುಣಿದಾಡದು ಹಂಸ,
ಆಪ್ಪಿನ ಬಿಗಿಯಲಿ ಮಲಗಿವೆ ಬಳ್ಳಿ,
ತಪ್ಪನೆ ಬಾ ಬಾರೆಲೆ ಮನೆಯಿಲ್ಲಿ.

೨

ಕರುಣೆಯದೆನಿತೋ ಜಗದೀಶನಲಿ !
ಧರೆ ಮಲಗಿರೆ ಮಬ್ಬಿನ ತಬ್ಬಿನಲಿ,
ಕರುಣೆಯು ಕರಗುತ ಕಿರಿ ಚುಕ್ಕಿಯಲಿ
ಮಿಡುಗುವುದೆ ಜೀವನ ಧಾರೆಯಲಿ.

Sri Vidyabharathi Book Corner, Sringeri

CC-O. In Public Domain. Digitized by eGangotri

ಕಾನನ ಮೊರೆವುದು, ಗಾಳಿಯ ಉಸಿರು
ಮೌನವ ಕೊರೆವುದು, ದುಗುಡದ ಬಸಿರು,
ಕಾರುವುದಳಲನು, ಹೀರುವುದಳಲ,
ಮಾರುವುದಳಲನು, ಕೊಳ್ಳುವುದಳಲ.

ಆಸೆಗೆ ಕೊನೆಯ ಜಲಾಂಜಲಿಯೆಂದು
ಸೂಸುತೆ ಬಿಸುಗಂಬನಿಗಳನಂದು
ದಾರಿಗನಿರುತಿರಲಾತನ ಪರಿಯ
ಆರೈಯಲು ಕೇಳಿದನಾ ಮುನಿಪ.

ಮೊಗವನು ಮುಸುಕಿದೆ ಗಂಟಿನ ಹುಬ್ಬು;
ನಗೆಯನು ಮುಸುಕಿದೆ ಚಿಂತೆಯ ಮಬ್ಬು ;
ಪ್ರಾರಂಭದ ಮಧುಮಾಸದೊಳಿಂತು
ಆರಂಭಿಸಿತೇ ಮಾಗಿಯ ತಂಪು ?

ಎಳವೆಯ ಕಾಲದಿ ಕುಣಿಯುವ ಜೀವ
ಇಳಿಹರಯದಿ ವಿರಮಿಸುತಲಿ, ನೋವ
ಕಳೆಯಲು ಒಳೆಯಲು ಪಕ್ವತೆಯಿಂದ,
ಕೊಳುವುದು ಮೃತ್ಯುವದನು ನಲವಿಂದ.

ಎದೆಯಲಿ ಬಯ್ಕೆ ಅದೇನೇನಿಹುದು ?
ತೊದಲೊಳಗಾವುದು ಭಾವನೆಯಿಹುದು ?
ಅದನೆಲ್ಲವ ತೆರೆ, ಎನ್ನನು ನಚ್ಚು!
ಒದವಿದೆ ನವ್ಯಯ ನಲ್ಮೆಗೆ ಕೆಚ್ಚು.

ಬನದಾ ಸುತ್ತಲು ನೋಟವ ಹರಹಿ
ಮನವನು ಬಿಚ್ಚಲು ದಾರಿಗ ಬಯಸಿ
ನಿಡುಸುಯ್ಲಿನ ಹೊಡೆತದ ರಭಸದಲಿ
ಕೆಡೆದನು ಬಿಸುಗಂಬನಿಕಾಲಿನಲಿ.

CC-O. In Public Domain. Digitized by eGangotri

ಮಾತೇ ಬಾರದು ಬಾಯ್ದೆರೆಗಳಲಿ
ಹೂತಿರೆ ನುಡಿ ದುಗುಡದ ಕೆಸರಿನಲಿ;
ಮಿಡುಕಾಡದು ತನು, ನುಣ್ಣುಟಿನಡುಕ
ನುಡಿದುದು ಹೃದಯದೊಳಿಪ್ಪ ಕೆಡುಕ.

ಹೇಳುವೆ, ಹೇಳದೆ ಮರೆಯಿಸಲೆಂತು ?
ಬಾಳುವೆ; ಬಾಳುವೆಯಾಸೆಯದಿನಿತು
ಕನಲುತಿರಲು ಹುಸಿ ಜೋಗದೊಳಾನು
ಜನರನು ವಂಚಿಪ ಹದನುಂಟೇನು ?

ಆಗಲಿ ನಿನ್ನೀ ಜಡಕಾವಿಗಳ
ಸೋಗನು ನಂಬುತ ಬಿಚ್ಚುವೆನಳಲ,
ಕಣ್ಣೀರಿನ ಸಾಕ್ಷಿಯೊಳಿರೆಯುವೆನು
ಮಣ್ಣಿನ ದೇಹಕೆ ಬೆದರಿಕೆಯೇನು ?

ಊರಲಿ ಹೆಸರಿಪ ಹೆಮ್ಮೈಗಳಿರದ
ದೂರದ ನಾಡಿನ ದಾರಿಯ ಕೆಲದ
ಬೀಳು ಗುಡಿಸಲಿನ ಮಧ್ಯದಿ ತಂದೆ
ಕಾಲವ ಕಳೆಯುತಲಿರ್ದನು ಹಿಂದೆ.

ಬಳಿಯೊಳೆ ಕೆರೆ, ತೊರೆ, ಬೆಂಗಡೆ ಚಿಗುರೆ
ತಳೆದೆಳಲತೆಮನೆ-ಆಚೆಗೆ ಮುಗಿಲ
ಪರಿಧಾನದ ಪರ್ವತ ಶಿಖರಗಳು
ಧರಣಿಯ ಸಿರಿಯನು ಕಾಯುತಲಿಹವು.

ಅಲ್ಲಿ ಬಸಂತನು ಬಿನದವ ಬಯಸಿ
ಮೆಲ್ಲಲರುಯ್ಯಲೆ ಯೇರುತ ಸೊಗಸಿ
ಮಲ್ಲಿಗಹಾಡನು ಕೋಗಿಲೆ ಹಾಡಿಲ
ಸೊಲ್ಲನು ಕೇಳುತ ಬವಣೆಯ ಮರೆವ.

Sri Vidyabharathi Book Centre, Sringeri

CC-O. In Public Domain. Digitized by eGangotri

ವನದೊಳಗಲ್ಲಿಯೆ ಮಾಮರವೇರಿ
ಜಿನುಗುವ ತುಂಬಿಗೆ ತಾನವ ಬೀರಿ,
ಕನಸಿನ ಸುಖಗಳ ನೆನಸಿನೊಳುಂಡು
ತಣಿದೆನು ಸೊಬಗಿನ ಮೇರೆಯ ಕಂಡು.

ಒಮ್ಮೆ ವಸಂತನ ಹುಗಿಲೆನ್ನೆದೆಯ
ಬಿಮ್ಮನೆ ಬಿರಿಯಿಸೆ ಕಾಡಿನ ಬಳಿಯ
ಬಳ್ಳಿಯ ಮಾಡದಿ ಹೂಗಳನಾಯ್ದು
ಮೆಲ್ಲೆಲರಿಗೆ ಮೈಯೊಡ್ಡಿದೆನಂದು.

ಆವುದೊ ಕೊಳಲಿನ ನುಣ್ದನಿಯೊಂದು
ಜೀವವ ಬೆರಸುತ ಬೆರಸುತ ಬಂದು
ದಾರಿಯ ನಾರಿಯ ದಾರಿಯ ತಡೆದು
ದೂರಕೆ ಸೆಳೆದುದು, ಹಾರಿತು ನೆಗೆದು.

ಮರೆತೆನು ಲೋಕವ ಲೋಕದ ನೆಲೆಯ,
ಮರೆತೆನು ಜನ್ಮವ ಜನ್ಮದ ಕೊನೆಯ;
ಮುರಲೀನಾದಾನಂದವ ಹೀರಿ
ಕರಣಗಳವು ಪಡೆದವು ಲೀನತೆಯ.

ಅರಿಯುವೆನೊಂದನು ಗೋವಳನೆಡೆಗೆ
ಸರಿದೆಂದೆನು—ಮೋಹನ ! ಗಾನಕ್ಕೆ
ಸೆರೆಯಾಳಾದೆನು; ಕರುಣಿಪುದೆಂದು
ಎರಗಿದೆನಾತನ ಪಾದದೊಳಂದು.

ಏನೆಲೆ ವನಿತೇ ಸಾಹಸವಿನಿತೇ !
ಗಾನದ ಹಕ್ಕಿಯ ಹಿಡಿಯುವೆನೆನುತೆ
ಚಿಲ್ಲಿದೆ ನೇಹದ ಕುಸುರಿಯ ಕಾಳ,
ಒಲ್ಲೆನೆನುತ ಊದಿರ್ದನು ಕೊಳಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾನದ ನಾಲಗೆ ಸುರಿಸಿತು ವಿಷವ,
ಗಾನದ ಕೊಳಲದು ಕಾರಿತು ನೋವ;
ಗಾನದ ಕಡಿತಲೆ ಕಡಿದುದು ತನುವ;
ಗಾನವು ಹಾಡಿದುದೆನ್ನಯ ಸಾವ.

ಏನೆಲೆ ಮೋಹನ ! ನಿನ್ನೀ ಜಗದಿ
ಗಾನವೆ ಸೀಮೆಯೆ ? ಗಾನವೆ ಪರಿಧಿ ?
ಹಾಡಿನ ಗೂಡಿನ ಹಕ್ಕಿಯ ತೆರದಿ
ಹಾಡಿಯೆ ಬಾಳ್ವುದೆ? ಸಾವುದೆ ಹಾಡಿ?

ತಾನಕೆ ಭಾವನೆಯೆಂಬುದೆ ಉಸಿರು;
ಗಾನಕೆ ಮುಗುದೆಯ ಪ್ರೇಮವೆ ಒಸರು ;
ಒಲವಿನೊಳುಕ್ಕದ ಹಾಡಿನ ಹೊನಲು
ಮಳಲಿನ ರಾಶಿಯ ಬತ್ತಿದ ಹೊನಲು.

ಹುಲು ಬಿದುರಿನ ಬಿರುಕಿನೊಳಿನಿತಿಂಪು
ತುಳುಕುವುದಾದರೆ, ಮುಗುದೆಯ ನೋಂಪು
ಸುರಿಸುವ ಕೂರ್ಮೆಯ ಜಿನುಗುವ ಭಾವ
ವರಿಸದೆ ನಿನ್ನೇಕಾಂತದ ಮನವ ?

ಹೋಗಲಿ, ನಿರ್ದಯ ನಿಷ್ಕರು ಮುರಲಿ
ಬಾಗಿಲ ತೆರೆಯಲಿ ಕಣ್ಣೆವೆಯಾಲಿ;
ಒಂದೇ ನೋಟವು ಹೀರಲಿ ಎದೆಯ;
ಒಂದೇ ಬೇಟವು ಬತ್ತಿಸಲೆದೆಯ.

ಊದಿದನಾತನು ಮುರಲಿಯನೊಮ್ಮೆ;
ಓದಿದನೆನ್ನಯ ಸಾವನದೊಮ್ಮೆ;
ಇನಿಯಳ ಕೆನ್ನೆಯ ಮುಟ್ಟಿದ ಅಧರ
ಇನಿದೊದವಿಸಿತು ಕಾಡಿನ ಬಿಸುಡ.

Sri Vidyabharati Book Centre, Sringeri

CC-O. In Public Domain. Digitized by eGangotri

ಎದೆಯಲಿ ಕೂಡಿತು ಗಾನವನಡವಿ
ಹೊದರಿನ ಹಕ್ಕಿಗೆ ರಸವನು ಕುಡಿಸಿ
ಪಡಿನುಡಿಯಾಗಿಸಿ ಮೌನದಿ ಮರಸಿ
ಕೊಡೆನೆಂದುದು ಕಾಡೆನ್ನೊಳು ಸೆಣಸಿ.

ಗುಡು ಗುಡಿಸುತ ಕುಡಿಮಿಂಚಿಂ ಹೊಡೆದು
ಹೊಡಕರಿಸುತೆ ಆಗಸದಲಿ ನೆಗೆದು
ಕಡೆಗೋಡುವ ಮೋಡದ ತೆರನವನು
ನಡೆದನು; ಕಾಣದೆ ಎನ್ನೀಹದನು ?

ಹೆತ್ತವರೆಲ್ಲಿಯೊ ಬಂಧುಗಳೆಲ್ಲಾ
ಎತ್ತಲಿಹರೊ ! ತಿಳಿದವಳಾನಲ್ಲ;
ಕತ್ತಲೆಯಿದೆ, ಎನ್ನಯ ನೆಲೆಯಿಹುದು;
ಸುತ್ತಲು ಜಗವಿದೆ, ದಾರಿಯದಿಹುದು.

ಆಸೆಯೆಸಳು ತಲೆಯೆತ್ತುವ ಮೊದಲೆ
ಸೌಸವವನು ಬಗೆ ಬೀರುವ ಮೊದಲೆ
ಹಾಸವರಳಿ ಕುಣಿದಾಡುವ ಮುನ್ನ
ಬೀಸಿತು ಸಂಜೆಯ ಗಾಳಿಯದೆನ್ನ.

ದೂರದ ನಾವೆಯ ಏರುವೆನೆನುತ
ಏರಿದೆ ಪ್ರೇಮದ ತರಣಿಯನೊಂದ;
ತೀರವು ನಿಲುಕದು, ಬಾರದು ನಾವೆ,
ಹೋರುವೆ ತೆರೆಯೊಡನೀ ಪರಿ ಸಾವೆ.

೩

ಎಂದಳುತಿರ್ಪಳ ಮುನಿಪತಿ ನೋಡಿ
ಕೊಂದೆಯೊ ಮೋಹನೆ ಎನ್ನನು ಕೂಡಿ?
ಎಂದಾಕೆಯ ಬರಸೆಳೆದಪ್ಪಿದನು
ಮುಂದೊರೆಯಲು ನುಡಿಯುಡುಗಿರಲವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತಿದು ಬೇಡಲೆ ಮೌನವೆ ಸಾಕು;
ಪ್ರೀತಿಯ ಸೆರೆಮನೆ—ತಕ್ಕೈಯೆ ಸಾಕು;
ಮಾತಿನ ಸಾರವ ನುಣ್ದುಟಿಗುಣಿಸು;
ಹೂತಿಡು ಮುನಿಸನು ನಲ್ಮೆಯ ಸಲಿಸು.

ಸಾವಿರ ತಪ್ಪನು ಮನ್ನಿಸು ನೀರೆ,
ಸಾವಿರದಪ್ಪಿದು ನಗೆಯನು ತೋರೆ !
ಪ್ರೇಮದ ನುಡಿಯಿದು ಬಿಸುಗಂಬನಿಯೂ;
ನೇಮದ ಮುದ್ರೆ ಇದೆನ್ನಯ ತುಟಿಯು.

ಸುಡುವೆನು ಕಾವಿಯ—ಕವಡಿನ ಮುಸುಕ;
ಕಡಿವೆನು ಜಡೆಯ–ನಿರಾಶೆಯ ತೊಡಕ–
ಮೊಗಮೊಗದೊತ್ತಿನೊಳಾದುದು ಸಿದ್ಧಿ;
ಹಗುರದ ಜೀವಕೆ ದೊರೆತುದು ಬುದ್ಧಿ,

ಇದಕೋ ಸವಿ ಸವಿಯಾಲಿಂಗನದಿ
ಎದೆಯಾ ಬೇನೆಯ ಆರಿಪೆ ಮಡದಿ
ಹಿಂದಿನ ನೆನಹನು ಕಂಬನಿ ತೊಳೆಗೆ
ಬಂದೇಕಾಂತದಿ ಸೇರೆನ್ನೆದೆಗೆ

ಕಳುವುದು ನಾಚುಗೆ ಮಾತಿನ ಸವಿಯ;
ಸೆಳೆವುದು ನಿಟ್ಟುಸಿರೊಲವಿನ ಸಿರಿಯ;
ಆವುದ ನಚ್ಚುವೆ ಪ್ರೇಮೋತ್ಸವದಿ ?
ಆವುದು ವಂಚಿಸದಿರ್ಪುದು ಮಡದಿ?

ನಂಬಿಸಿ ನಂಬಿಸಿ ಹರಿವುದು ಗಳಿಗೆ;
ಚುಂಬಿಸಿ ಚುಂಬಿಸಿ ಸಫಲವದೆನಿಕೆ !
ನಾಳೆಯ ಮೃತ್ತದು ಸಾವೆಂದೆಳಲು
ತೋಳಿನ ಸೆರೆಯೊಳೆ ಇಂದಿನ ಬಾಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ತೋಳಿನ ಮರೆ ಸಾವನು ಮರಸುವುದು
ಬಾಳುವ ತತ್ವವನದೆ ತಿಳಿಯಿಪ್ಪುದು
ಜರೆ ಜವ್ವನವನು ಹೀರುವ ಪೊದಲೆ
ತೊರೆ ಲಜ್ಜೆಯ—ಸೇರೆನ್ನೆದೆಯೊಳಗೆ.

ಬಾರಿನ್ನೊಮ್ಮೆ ಆದೊಂದೇ ಮುತ್ತ
ಹೀರುವೆ, ಸಾರಿಸು ಖೇದವನತ್ತ;
ಕದಪಿದು ನುಣ್ದುಟಿಯೊರಗುವ ಬೀಡು
ಎದೆಯೆನ್ನನು ಸೆರೆವಿಡಿದಿಹ ಗೂಡು.

ಏನೆಲೆ ಮೋಹನೆ ! ನಿನ್ನನು ಕಂಡು
ಗಾನಕೆ ಸೋಲ್ವನೆ ಹೆಸರಿನ ಗಂಡು ?
ಹರಯದ ಮುಗುಳಿಗೆ ಹಾವಸೆ ಕವಿದು
ಒರಗುತಲಿರ್ದುದು ಕೊರಗಿರ್ದಂದು.

ಜೀವನವೆಂದರೆ ಆವುದೊ ವನಿತೆ?
ಸಾವಿಗೆ ಬೆದರುತೆ ಬಾಳುವುದನಿತೆ ?
ಒಲವು, ಗೆಲವು, ನಗೆ, ಬಗೆಗಳ ಬುಗ್ಗೆ
ಗುಳುಗುಳಿಸಲಿ, ಆದೆ ಜೀವನದೊಸಗೆ.

ಹೇಳುವರೇನನೊ ತತ್ವವಿದೆಂದು;
ಬಾಳ್ವರದಕೆ ಮೈನಡುಗುತ ನೊಂದು;
ಕೂಟವೆ ನಮ್ಮಯ ತತ್ವದ ಮುಕ್ತಿ;
ಬೇಟವೆ ನಮ್ಮಯ ಭಕ್ತಿ ವಿರಕ್ತಿ.

ಒಪ್ಪೆಲೆ ! ಮೋಹನನನು ನೀನೊಪ್ಪ;
ತಪ್ಪದು ಪ್ರೇಮವೆನುತೆ ತೆಗೆದಪ್ಪ.
ತಪ್ಪಾವುದೊ ಒಪ್ಪಾವುದೊ ನಮಗೆ ?
ಆಪ್ಪೊಂದೇ ಬದುಕಾಗಿಹ ಜನಕೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಜನಗಳ ಸುಳಿವಿಲ್ಲೀ ಕಾಡಿನಲಿ,
ನೆನಹೆಮ್ಮನು ಕೇಳುವ ವೇಳೆಯಲಿ,
ಮಿನುಗುತಿರುವ ತಾರೆಗಳಭ್ರದಲಿ;
ಕುಣಿಯಲಿ 'ನಾವೇ ಅವರೆ'ನ್ನುತಲಿ!

ಹಾಡಲಿ ಕೋಗಿಲೆ ! ಆರಳಲಿ ಮೊಗ್ಗೆ !
ಮೂಡಲಿ ಚಿಗುರುಕ್ಕಲಿ ಕಿರಿಬುಗ್ಗೆ !
ಒರೆಯಲಿ ! "ಎಮ್ಮೆದೆಹಾಸಿನೊಳವರು
ಒರಗಿಹರೈ ಜೋಡಿನ ಜೀವಿಗಳು."

*

ಪೀಡಿಪನಾತನು, ಬಾಡುವಳವಳು,
ಕಾಡುವನಾತನು, ನಾಚುವಳವಳು,
ಮೌನವನರಿಯದೆ ಗಳಹುವನವನು;
ಮೌನದೆ ಹೃದಯವ ಕರಗಿಪಳವಳು.

ವೀರನ ತೆರದಲಿ ಕಪ್ಪವ ಕೀಳಿ
ಹೋರುವನಾತನು ಹೆಮ್ಮೆಯ ತಾಳಿ;
ಒಪ್ಪಿಗೆಯಿಂದಲಿ ಕಪ್ಪವ ಕೊಟ್ಟು
ಅಪ್ಪಿಗೆ ಸೋಲ್ವಳವಳು ಮೈಬಿಟ್ಟು.

ಸೆಳವಿನ ಹೊನಲಾತನ ಸಂಭ್ರಮವು;
ಒಳುಕುವ ಲತೆಯಾ ವಿರಹಿಣಿಯೊಲವು;
ಮುಳಿದಿಕ್ಕುವುದಾ ವಿರಹಿಯ ಒಲ್ಮೆ;
ಮುಳುಗೇಳುವುದಾ ವನಿತೆಯ ಬಲ್ಮೆ;

ಏನೇನೋ ಹಳೆನೆನಹನದೆಲ್ಲಾ
ಜಾನಿಸಿ ಕಳೆದರು ಜಾವವನೆಲ್ಲಾ;
ಮೂಡಲು ಬಿಳುಪೇರಲು ಬೆಚ್ಚಿದರು
ಬೈವಿರಹಕಿನಿಯೆಯಾ ನೇದರಲು.

Sri Vidyaranya Digitized by eGangotri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದ ನವೋದಯ ಕಾವ್ಯಸೃಷ್ಟಿಗೆ ನೆರವಾದವರಲ್ಲಿ ಕಡೆಂಗೋಡ್ಲು ಶಂಕರಭಟ್ಟರು ಒಬ್ಬರು. ಕವಿತೆ, ಸಣ್ಣ ಕಥೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ ಈ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ನಡೆಸಿದವರು, ಇವರು.

ಅವರ ಪ್ರತಿಭೆ ಎರಡು ಮುಖಗಳಲ್ಲಿ ಅಭಿವ್ಯಕ್ತಿ ಪಡೆದಿದೆ. ಸಾಹಿತ್ಯ ಮತ್ತು ಪತ್ರಿಕೋದ್ಯಮಗಳಲ್ಲಿ ಅವರ ಸಾಧನೆ ಉತ್ತಮ ಮಟ್ಟದ್ದು.

ಶಂಕರಭಟ್ಟರು ವಿದ್ವಾಂಸರು, ಪ್ರಾಧ್ಯಾಪಕರು, ಸಾಹಿತಿಗಳು. ಅವರ 'ನಲ್ಮೆ' ಕಥನ ಕವನಕ್ಕೆ ಒಂದು ಮಾದರಿ.

ಅಂತರ್ಮುಖಿಯಾದ ಶಂಕರಭಟ್ಟರ ಮನೋಧರ್ಮ ಸರಳ, ಮಧುರ. ಆದರೆ ಶಿಸ್ತು ಅವರ ಶೀಲ.

ಜನಪ್ರಿಯ ಕತೆಗಾರರಾದ ಭಟ್ಟರ ಕಥನ ಕವನ ಸಂಗ್ರಹ 'ನಲ್ಮೆ'.

IBH

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

Sri Vidyabharathi Book Centre, Sringeri